ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀಮತಿ ಬಿ.ವಿ. ನಾಗರತ್ನ ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀಮತಿ ಎಂ.ಜಿ. ಉಮಾ

ಮಾರ್ಟಿನ್ ಸುಜಯ್ -ವಿರುದ್ಧ-ಶ್ರೀಮತಿ ಅಮೂಲ್ಯಬೃಂದಾ

ಸಂಕೀರ್ಣ ಪ್ರಥಮ ಅಪೀಲು ಸಂಖ್ಯೆ: 5161/2019 ದಿನಾಂಕ: 27 ನೇ ಜನವರಿ, 2021.

ತೀರ್ಪು

ನ್ಯಾಯಮೂರ್ತಿ ಶ್ರೀಮತಿ ಎಂ.ಜಿ. ಉಮಾ:

ಈ ಅಪೀಲನ್ನು ಅಂಗೀಕರಿಸುವುದಕ್ಕೆ ಪಟ್ಟಿ ಮಾಡಿದ್ದರೂ, ಈರ್ವರೂ ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳ ಸಹಮತಿಯೊಂದಿಗೆ ಅಂತಿಮವಾಗಿ ಸುನಾವಣೆ ಮಾಡಲಾಗಿದೆ.

2. ಅಪೀಲುದಾರ-ಪತಿಯು, ವಿಶೇಷ ವಿವಾಹ ಅಧಿನಿಯಮ, 1954 ರ (ಇದರಲ್ಲಿ ಇನ್ನು ಮುಂದೆ ಸಂಕ್ಷಿಪ್ತವಾಗಿ "1954 ರ ಅಧಿನಿಯಮ " ಎಂದು ಉಲ್ಲೇಖಿಸಲಾಗಿದೆ) 27 (2) (ii) ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ವಜಾಗೊಳಿಸಿ, ಮೈಸೂರಿನ II ನೇ ಹೆಚ್ಚುವರಿ ಪ್ರಧಾನ ಕುಟುಂಬ ನ್ಯಾಯಾಲಯದ (ಇದರಲ್ಲಿ ಇನ್ನು ಮುಂದೆ ಸಂಕ್ಷಿಪ್ತವಾಗಿ " ಅಧಿವಿಚಾರಣಾ ನ್ಯಾಯಾಲಯ ೨೨ ಎಂದು ಉಲ್ಲೇಖಿಸಲಾಗಿದೆ) ಕಡತ ಎಂ.ಸಿ.ಸಂಖ್ಯೆ: 395/2016 ರಲ್ಲಿ ಹೊರಡಿಸಿದದಿನಾಂಕ: 03/04/2019 ರ ಪ್ರಶ್ನಿತ ತೀರ್ಪಿನಿಂದ ಬಾಧಿತನಾಗಿ ಈ ನ್ಯಾಯಾಲಯದ ಮುಂದೆ ಅಪೀಲು ಸಲ್ಲಿಸಿದ್ದಾನೆ.

3. ಮೊಕದ್ದಮೆಯ ಸಂಕ್ಷಿಪ್ತ ಸಂಗತಿಗಳೆಂದರೆ, ಅಪೀಲುದಾರ ಮತ್ತು ಪ್ರತಿವಾದಿಯು ಪತಿ-ಪತ್ನಿಯಾಗಿರುವರು.ಅವರು ಕ್ರಿಶ್ಚಿಯನ್ ಧರ್ಮದವರಾಗಿದ್ದು, ದಿನಾಂಕ:18/04/2008 ರಂದು ಅವರ ವಿವಾಹವನ್ನು ಮೈಸೂರಿನ ವಾಸ್ಕೆ ಕೆಥೆಡ್ರುಲ್ ಚರ್ಚ್ನಲ್ಲಿ ನೆರವೇರಿಸಲಾಗಿತ್ತು.ಪ್ರತಿವಾದಿಯು ಅಪೀಲುದಾರನಿಗೆ ಕಿರುಕುಳ ನೀಡಿ, ಅಶ್ಲೀಲ ಭಾಷೆ ಬಳಕೆ ಮಾಡಿ ಬಯ್ಯುತ್ತಿದ್ದುದಾಗಿ ಆರೋಪಿಸಲಾಗಿದೆ.ಆಕೆಯು ಪ್ರತ್ಯೇಕ ಮನೆ ಮಾಡುವಂತೆ ಪೀಡಿಸುತ್ತಿದ್ದು, ಮೈಸೂರಿನ ಕುವೆಂಪು ನಗರದಲ್ಲಿ ಬಾಡಿಗೆ ಮನೆಗೆ ಸ್ಥಳಾಂತರವಾದ ನಂತರ ಸಹ, ಪ್ರತಿವಾದಿಯು ತನ್ನ ವರ್ತನೆಯನ್ನು ಬದಲಾಯಿಸಿಕೊಳ್ಳಲಿಲ್ಲ.ಬದಲಿಗೆ, ಸುಳ್ಳು ಆರೋಪಗಳನ್ನು ಮಾಡಿ ಆಕೆಯು ಅಪೀಲುದಾರನ ವಿರುದ್ಧ ದೂರನ್ನು ದಾಖಲಿಸಿದಳು.ತರುವಾಯ, ಪ್ರತಿವಾದಿಯು ಅಪೀಲುದಾರನಿಗೆ ತಿಳಿಸದೆ ವಿವಾಹವಾಗಿ ಹೋದ ಮನೆಯನ್ನು ತೊರೆದು, ತನ್ನ ತವರು ಮನೆಯಲ್ಲಿ ಇರಲಾರಂಭಿಸಿದಳು.

4. ಅಪೀಲುದಾರನು, ಎಂ.ಸಿ.ಸಂಖ್ಯೆ: 81/2009 ರಲ್ಲಿ ವಿಚ್ಛೇದನಕ್ಕಾಗಿ ಅರ್ಜಿ ಸಲ್ಲಿಸಿದ್ದನಾದರೂ, ತರುವಾಯದಲ್ಲಿ ಅರ್ಜಿಯನ್ನು ವಿವಾಹವಾದ ದಿನಾಂಕದಿಂದ ಒಂದು ವರ್ಷದ ಒಳಗಾಗಿ ಸಲ್ಲಿಸಿದ್ದರಿಂದಾಗಿ, ಅದನ್ನು ಹಿಂತೆಗೆದುಕೊಂಡಿದ್ದನೆಂದು ಹೇಳಲಾಗಿದೆ.ಆದಾಗ್ಯೂ, ನ್ಯಾಯಾಲಯದ ನಿರ್ದೇಶನದ ಪ್ರಕಾರ, ಆತನು ಪ್ರತಿವಾದಿಗೆ ಜೀವನಾಂಶವಾಗಿ ತಿಂಗಳಿಗೆ 3,000/- ರೂ.ಗಳನ್ನು ಸಂದಾಯ ಮಾಡುತ್ತಿದ್ದನು.ಆತನು ಏಪ್ರಿಲ್, 2011 ರವರೆಗೆ ಜೀವನಾಂಶ ಸಂದಾಯ ಮಾಡಿರುವನು.ಪ್ರತಿವಾದಿಯು, ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರ ರಕ್ಷಣೆ ಅಧಿನಿಯಮ, 2005 ರ (ಇದರಲ್ಲಿ ಇನ್ನು ಮುಂದೆ ಸಂಕ್ಷಿಪ್ತವಾಗಿ ಡಿ.ವಿ. ಅಧಿನಿಯಮ " ಎಂದು ಉಲ್ಲೇಖಿಸಲಾಗಿದೆ) ಉಪಬಂಧಗಳ ಮೇರೆಗೆ ಮೈಸೂರಿನ ಮಾನ್ಯ III ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ಇವರ ಮುಂದೆ ಸಿ.ಎಂಐಎಸ್ಸಿ.ಸಂಖ್ಯೆ: 48/2010 ನ್ನು ಸಲ್ಲಿಸಿ, ಮನೆಗೆ ಏರ್ಪಾಡು ಮಾಡಲು ಅಪೀಲುದಾರನಿಗೆ ನಿರ್ದೇಶಿಸುವ ಏಕಪಕ್ಷೀಯ ಆದೇಶವನ್ನು ಪಡೆದಳು ಹಾಗೂ ಅಪೀಲುದಾರನ ವಿರುದ್ಧ ಜಾಮೀನು-ರಹಿತ ವಾರಂಟನ್ನು ಸಹ ನೀಡಲಾಯಿತು.ಅಪೀಲುದಾರನು, ಮೈಸೂರಿನ ಮಾನ್ಯ I ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಮುಂದೆ ಕ್ರಿಮಿನಲ್ ಅಪೀಲುಸಂಖ್ಯೆ: 144/2013 ರಲ್ಲಿ ಅಪೀಲನ್ನು ಹೂಡಿದ್ದು, ಅದನ್ನು ಪುರಸ್ಕರಿಸಿ,

ವಿಷಯವನ್ನು ಅಧಿವಿಚಾರಣಾ ನ್ಯಾಯಾಲಯಕ್ಕೆ ಕಳುಹಿಸಲಾಗಿತ್ತೆಂದು ಹೇಳಲಾಗಿದೆ.ವಾದ-ಪ್ರತಿವಾದದ ನಂತರ, ಮಾಸಿಕ 2,000/- ರೂ.ಗಳ ಜೀವನಾಂಶ ಸಂದಾಯ ಮಾಡಲು ಅಪೀಲುದಾರನಿಗೆ ನಿರ್ದೇಶಿಸಿ, ಸಿ.ಎಂಐಎಸ್ಸಿ.ಸಂಖ್ಯೆ: 48/2010 ನ್ನು ಪುನಃ ಪುರಸ್ಕರಿಸಲಾಗಿತ್ತು.ತರುವಾಯದಲ್ಲಿ, ತಾನು ತೀವ್ರ ಒತ್ತಡ ಮತ್ತು ನಿರಂತರ ಮೂತ್ರಕೋಶ ರೋಗದಿಂದ ಬಳಲುತ್ತಿರುವುದರಿಂದ, ಬದಲಾದ ಸಂದರ್ಭಗಳಲ್ಲಿ, ಜೀವನಾಂಶ ಸಂದಾಯ ಮಾಡಲು ತನಗೆ ನೀಡಿದ ನಿರ್ದೇಶನವನ್ನು ಮಾರ್ಪಾಡುಗೊಳಿಸಲು ಕೋರಿ ಅಪೀಲುದಾರನು, ಸಿ.ಎಂಐಎಸ್ಸಿ.ಸಂಖ್ಯೆ: 65/2014 ನ್ನು ಸಲ್ಲಿಸಿದ್ದನು.

5. ಪ್ರತಿವಾದಿಯು, ದಾಂಪತ್ಯದ ಹಕ್ಕುಗಳ ಪೂರ್ವ ಸ್ಥಿತಿ ಸ್ಥಾಪನೆಯನ್ನು ಕೋರಿ ಎಂ.ಸಿ.ಸಂಖ್ಯೆ: 182/2011 ನ್ನು ಸಲ್ಲಿಸಿದರೆ, ಅಪೀಲುದಾರನು ವಿವಾಹ ವಿಚ್ಛೇದನ ಕೋರಿ ಎಂ.ಸಿ.ಸಂಖ್ಯೆ: 435/2011 ನ್ನು ಸಲ್ಲಿಸಿದ್ದನೆಂದು ವಾದಿಸಲಾಗಿದೆ.ವಿವಾಹ ವಿಚ್ಛೇದನ ಕೋರಿ ಅಪೀಲುದಾರನು ಸಲ್ಲಿಸಿದ ಅರ್ಜಿಯನ್ನು ವಜಾಗೊಳಿಸಿದರೆ,ದಿನಾಂಕ: 17/ 4/2015 ರ ಸಾಮಾನ್ಯ ತೀರ್ಪಿನ ಮೂಲಕ ದಾಂಪತ್ಯದ ಹಕ್ಕುಗಳ ಪೂರ್ವ ಸ್ಥಿತಿ ಪ್ರಾಪ್ತಿ ಕೋರಿ ಪ್ರತಿವಾದಿಯು ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಲಾಗಿತ್ತು.ಈ ನಡುವೆ, ಜೀವನಾಂಶ ಕೋರಿ ಪ್ರತಿವಾದಿಯು 1973 ರ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 125 ನೇ ಪ್ರಕರಣದ ಅಡಿಯಲ್ಲಿ ಅರ್ಜಿ ಸಲ್ಲಿಸಿದ್ದು, ಅದನ್ನುದಿನಾಂಕ: 12/01/2016 ರಂದು ವಜಾಗೊಳಿಸಲಾಗಿತ್ತು.ಹಾಗಾಗಿ, ಪ್ರತಿವಾದಿಯು ವಿವಾಹವಾದ ದಿನದಿಂದಲೂ ಅಪೀಲುದಾರನಿಗೆ ಕಿರುಕುಳ ನೀಡುತ್ತಿದ್ದಳು ಮತ್ತು ಆಕೆಯು ತಾನಾಗಿಯೇ ಆತನನ್ನು ತೊರೆದು, ತನ್ನ ತವರು ಮನೆಯಲ್ಲಿ ವಾಸಿಸುತ್ತಿದ್ದಳೆಂದು ಹೇಳಲಾಗಿದೆ.

6. ಅಪೀಲುದಾರನ ನೌಕರಿಯನ್ನು ವೈದ್ಯಕೀಯ ಕಾರಣಗಳ ಮೇರೆಗೆ ಕೊನೆಗೊಳಿಸಲಾಗಿತ್ತಾದ್ದರಿಂದ, ಆತನು ನಿರುದ್ಯೋಗಿಯಾಗಿದ್ದನೆಂದು ಹೇಳಲಾಗಿದೆ.ಪಕ್ಷಕಾರರ ನಡುವಿನ ವೈವಾಹಿಕ ಸಂಬಂಧವು ಸಂಧಾನವನ್ನು ಮೀರಿ ಬೇರ್ಪಟ್ಟಿತ್ತು ಮತ್ತು ಅವರು ಏಳು ವರ್ಷಗಳಿಗಿಂತ ಹೆಚ್ಚಿನ ಅವಧಿಯಿಂದ ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ.ದಿನಾಂಕ: 17/04/2015 ರ ತೀರ್ಪಿನ ಮೂಲಕ ಪ್ರತಿವಾದಿಯ ಪರವಾಗಿ ದಾಂಪತ್ಯದ ಹಕ್ಕುಗಳ ಪೂರ್ವ ಸ್ಥಿತಿ ಪ್ರಾಪ್ತಿಗಾಗಿ ಡಿಕ್ರಿ ನೀಡಲಾಗಿತ್ತಾದರೂ, ಅವರಿಬ್ಬರೂ ಒಟ್ಟಿಗೆ ವಾಸಿಸುತ್ತಿರಲಿಲ್ಲ ಮತ್ತುದಿನಾಂಕ: 16/04/2016 ರಂದು, ಎಂದರೆ 1954 ರ ಅಧಿನಿಯಮದ 27 (2) (ii) ನೇ ಪ್ರಕರಣದ ಅಡಿಯಲ್ಲಿ ಉಪಬಂಧಿಸಿದ ಶಾಸನಾತ್ಮಕ ಅವಧಿ ಕಳೆದು ಹೋದ ನಂತರ ಅರ್ಜಿಗಾಗಿ ಕಾರಣ ಉದ್ಭವಿಸಿತ್ತು.ಆದುದರಿಂದ, ವಿಚ್ಛೇದನದ ಡಿಕ್ರಿಯ ಮೂಲಕ ವಿವಾಹ ವಿಘಟನೆ ಅರ್ಜಿಯನ್ನು ಪುರಸ್ಕರಿಸುವಂತೆ ಕೋರಲಾಗಿತ್ತು.

7. ಪ್ರತಿವಾದಿಯು ಅಧಿವಿಚಾರಣಾ ನ್ಯಾಯಾಲಯದ ಮುಂದೆ ಹಾಜರಾಗಿ, ತಾನು ಅಪೀಲುದಾರನೊಂದಿಗೆ ಕ್ರೂರವಾಗಿ ವರ್ತಿಸಿದ್ದೆ ಅಥವಾ ಯಾವುದೇ ಸಮಯದಲ್ಲಿ ಆತನನ್ನು ತೊರೆದಿದ್ದೆನೆಂಬುದನ್ನು ಅಲ್ಲಗಳೆದು, ಆತನ ಕ್ಲೇಮನ್ನು ವಿರೋಧಿಸಿದ್ದಳು.ಇದಕ್ಕೆ ಬದಲಾಗಿ ಆಕೆಯು, ಅಪೀಲುದಾರನೇ ತನ್ನೊಂದಿಗೆ ಕ್ರೂರವಾಗಿ ನಡೆದುಕೊಂಡಿದ್ದು, ಯಾವುದೇ ಕಾನೂನುಬದ್ಧ ಸಮರ್ಥನೆ ಇಲ್ಲದೆ ತನ್ನನ್ನು ತೊರೆದಿದ್ದಾನೆಂದು ವಾದಿಸಿದ್ದಳು.ಅಪೀಲುದಾರನು ಈಗ ವಾದಿಸಿದ ಕಾರಣಗಳನ್ನೇ ವಿಚ್ಛೇದನಕ್ಕಾಗಿ ಈ ಮೊದಲು ಸಲ್ಲಿಸಿದ್ದ ಅರ್ಜಿಯಲ್ಲಿ ಎತ್ತಿದ್ದು, ಯಾವುದೇ ಹೊಸ ಕಾರಣಗಳನ್ನು ಪ್ರಸ್ತುತ ಅರ್ಜಿಯಲ್ಲಿ ಸಮರ್ಥಿಸಿಕೊಂಡಿಲ್ಲವೆಂದು, ಮೊದಲಿನ ಅರ್ಜಿಯನ್ನು ಅವೇ ಕಾರಣಗಳ ಮೇಲೆ ವಜಾಗೊಳಿಸಿತ್ತಾದ್ದರಿಂದ, ಪ್ರಸ್ತುತ ಅರ್ಜಿಯನ್ನು ಪೂರ್ವ ನ್ಯಾಯ ನಿರ್ಣಯ ತತ್ತ್ವದ ಮೂಲಕ ಸಮರ್ಥಿಸಬೇಕೆಂದು ಪ್ರತಿವಾದಿಯು ವಾದಿಸಿದ್ದಾಳೆ.ಅಪೀಲುದಾರನ ಜೊತೆಗೂಡಿ ವೈವಾಹಿಕ ಜೀವನ ನಡೆಸಲು ಪ್ರತಿವಾದಿಯು ಸಿದ್ಧಳಿರುವಳೆಂದು ಹಾಗೂ ಅಪೀಲುದಾರನ ವಿರುದ್ಧ ಹೂಡಿದ ದೂರನ್ನು ಹಿಂತೆಗೆದುಕೊಳ್ಳಲು ಸಹ ಆಕೆಯು ಸಿದ್ಧಳಿರುವಳೆಂದು ಹೇಳಿದ್ದಾಳೆ.ನಿರುದ್ಯೋಗಿಯಾಗಿದ್ದು, ಅನಾರೋಗ್ಯದಿಂದ ಬಳಲುತ್ತಿರುವನೆಂಬ ಅಪೀಲುದಾರನ ವಾದವನ್ನು ಅಲ್ಲಗಳೆಯಲಾಗಿದೆ ಮತ್ತು ಅಪೀಲುದಾರನು ಎರಡನೇ ಮದುವೆ ಮಾಡಿಕೊಳ್ಳಲು ಪ್ರಯತ್ನಿಸುತ್ತಿರುವನೆಂದು ವಾದಿಸಿದ್ದಾಳೆ.ವಾಸ್ತವವಾಗಿ, ಪ್ರತಿವಾದಿಯು ದಾಂಪತ್ಯದ ಹಕ್ಕುಗಳ ಪೂರ್ವ ಸ್ಥಿತಿ ಪ್ರಾಪ್ತಿಗಾಗಿ ಹೊರಡಿಸಿದ ಡಿಕ್ರಿಯ ಪಾಲನೆಗಾಗಿ ಅಪೀಲುದಾರನು ತನ್ನನ್ನು ಮರಳಿ ಕರೆದುಕೊಂಡು ಹೋಗುವಂತೆ ಕೇಳಿ ನೋಟೀಸನ್ನು ನೀಡಿದ್ದಾಳಾದರೂ, ಅದಕ್ಕೆ ಆತನು ಉತ್ತರ ನೀಡಿಲ್ಲ.

8. ಅಧಿವಿಚಾರಣಾ ನ್ಯಾಯಾಲಯವು, ಅಪೀಲುದಾರನ ಮತ್ತು ಪ್ರತಿವಾದಿಯ ಸಾಕ್ಷ್ಯವನ್ನು ದಾಖಲಿಸಿದೆ ಮತ್ತು ಅಪೀಲುದಾರನ ಪರ ನಿಶಾನೆ ಪಿ .1 ರಿಂದ ಪಿ .12 ರವರೆಗಿನ ದಾಖಲೆಗಳನ್ನು ಮತ್ತು ಪ್ರತಿವಾದಿಯ ಪರ ನಿಶಾನೆ ಆರ್ .1 ರಿಂದ ಆರ್ .10 ರವರೆಗಿನ ದಾಖಲೆಗಳನ್ನು ಗುರುತಿಸಿದೆ.ಈ ಎಲ್ಲಾ ಸಾಕ್ಷ್ಯಾಧಾರಗಳನ್ನು ಪರಿಗಣನೆಗೆ

ತೆಗೆದುಕೊಂಡ ನಂತರ, ಅಧಿವಿಚಾರಣಾ ನ್ಯಾಯಾಲಯವು, ಪ್ರಸ್ತುತ ಅಪೀಲಿನಲ್ಲಿ ಪ್ರಶ್ನಿಸಿರುವ ಅರ್ಜಿಯನ್ನು ವಜಾಗೊಳಿಸಿದೆ.

9. ಅಪೀಲುದಾರನ ಪರ ಮಾನ್ಯ ನ್ಯಾಯವಾದಿ ಶ್ರೀ ವಿ. ಎಸ್. ಬಿಜು ಮತ್ತು ಪ್ರತಿವಾದಿಯ ಪರ ಮಾನ್ಯ ನ್ಯಾಯವಾದಿ ಶ್ರೀ ಪಿ. ರುದ್ರಪ್ಪ ಇವರುಗಳ ವಾದವನ್ನು ನಾವು ಆಲಿಸಿದ್ದೇವೆ ಮತ್ತು ಅಧಿವಿಚಾರಣಾ ನ್ಯಾಯಾಲಯದ ದಾಖಲೆಗಳನ್ನೂ ಒಳಗೊಂಡಂತೆ ಎಲ್ಲ ಸಾಕ್ಷ್ಯಾಧಾರಗಳನ್ನು ನಾವು ಪರಿಶೀಲಿಸಿದ್ದೇವೆ.

10. ಅಪೀಲುದಾರನ ಪರ ಪರ ಮಾನ್ಯ ಮಾನ್ಯ ನಾಯವಾದಿಗಳು ನಿವೇದಿಸಿ ಕೊಂಡಿರುವುದೇನೆಂದರೆ, ಅಧಿವಿಚಾರಣಾ ನ್ಯಾಯಾಲಯದ ಮುಂದೆ ಅಪೀಲುದಾರನು ಸಲ್ಲಿಸಿದ ಅರ್ಜಿಯು, 1954 ರ ಅಧಿನಿಯಮದ 27 (2)  (ii) ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಿರುವಂಥದ್ದಾಗಿದ್ದು, ಅದು, ವಿವಾಹವಾಗಿರುವ ಎರಡೂ ಪಕ್ಷಕಾರರು, ಪಕ್ಷಕಾರರಾಗಿದ್ದಂಥ ವ್ಯವಹರಣೆಯಲ್ಲಿ ದಾಂಪತ್ಯದ ಹಕ್ಕುಗಳ ಪೂರ್ವ ಸ್ಥಿತಿ ಪ್ರಾಪ್ತಿಗೆ ಸಂಬಂಧಿಸಿದ ಡಿಕ್ರಿಯನ್ನು ಹೊರಡಿಸಿದ ನಂತರ, ಒಂದು ವರ್ಷ ಅಥವಾ ಹೆಚ್ಚಿನ ಅವಧಿಗಾಗಿ, ವಿವಾಹದ ಪಕ್ಷಕಾರರ ನಡುವೆ ದಾಂಪತ್ಯದ ಹಕ್ಕುಗಳ ಪೂರ್ವ ಸ್ಥಿತಿ ಪ್ರಾಪ್ತಿಯಾಗದೆ ಇರುವಾಗ, ವಿಚ್ಛೇದನಕ್ಕಾಗಿ ಅರ್ಜಿ ಸಲ್ಲಿಸಲು ಇಬ್ಬರಿಗೂ ಹಕ್ಕನ್ನು ನೀಡುತ್ತದೆ.ಪೂರ್ವ ಸ್ಥಿತಿ ಪ್ರಾಪ್ತಿಗಾಗಿ ಪ್ರತಿವಾದಿ ಪರ ನೀಡಿದ್ದ ಡಿಕ್ರಿಯನ್ನುದಿನಾಂಕ: 17/04/2015 ರಂದು ಹೊರಡಿಸಲಾಗಿತ್ತು ಮತ್ತು ಒಂದು ವರ್ಷ ಕಳೆದ ನಂತರವೂ, ಪೂರ್ವ ಸ್ಥಿತಿ ಸ್ಥಾಪನೆ ಇರಲಿಲ್ಲ.ಅಂಥ ಸಂದರ್ಭಗಳ ಮೇರೆಗೆ, ವಿವಾಹದ ಯಾರೇ ಪಕ್ಷಕಾರರಾಗಲಿ ವಿಚ್ಛೇದನ ಕೋರಲು ಕಾನೂನಿನ ಈ ಉಪಬಂಧವನ್ನು ಅನ್ವಯಿಸಬಹುದಾಗಿದೆ. ಸಿಂಧುವಾದ ಕಾರಣವಿಲ್ಲದೆ ಅರ್ಜಿಯನ್ನು ನಿರಾಕರಿಸಿ, ಅಧಿವಿಚಾರಣಾ ನ್ಯಾಯಾಲಯವು ತಪ್ಪೆಸಗಿದೆ.

11. ಇದಕ್ಕೆ ತದ್ವಿರುದ್ಧವಾಗಿ, ಪ್ರತಿವಾದಿ ಪರ ಮಾನ್ಯ ನ್ಯಾಯವಾದಿಗಳು ಪ್ರಶ್ನಿತ ತೀರ್ಪನ್ನು ಸಮರ್ಥಿಸಿಕೊಂಡು, ಸದರಿ ಅರ್ಜಿಯಲ್ಲಿ ಯಾವುದೇ ಗುಣಾರ್ಹತೆಗಳಿಲ್ಲದ್ದರಿಂದ, ಅಧಿವಿಚಾರಣಾ ನ್ಯಾಯಾಲಯವು ಅದನ್ನು ಸರಿಯಾಗಿಯೇ ವಜಾಗೊಳಿಸಿದೆ ಎಂದು ವಾದಿಸಿದ್ದಾರೆ.

12. ಸಂಬಂಧಪಟ್ಟ ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳ ವಾದವನ್ನು ಆಲಿಸಲಾಗಿ, ನಮ್ಮ ಪರಿಗಣನೆಗಾಗಿ ಈ ಮುಂದಿನ ಅಂಶಗಳು ಉದ್ಭವಿ ವಿಸಿವೆ:

"1) ಎಂ.ಸಿ.ಸಂಖ್ಯೆ: 395/2016 ರಲ್ಲಿ ಹೊರಡಿಸಿದ ಅಧಿವಿಚಾರಣಾ ನ್ಯಾಯಾಲಯದ ತೀರ್ಪು ಮತ್ತು ಡಿಗ್ರಿಗಳು, ಈ ಅಪೀಲಿನಲ್ಲಿ ಹಸ್ತಕ್ಷೇಪ ಮಾಡಲು ಅಪೇಕ್ಷಿಸುತ್ತವೆಯೇ?

2) ಆದೇಶವೇನು?"

13. 1954 ರ ಅಧಿನಿಯಮದ 27 ( 2)  (ii) ನೇ ಪ್ರಕರಣವನ್ನು ಈ ಮುಂದಿನಂತೆ ಓದಲಾಗಿದೆ:

" 27 ನೇ ಪ್ರಕರಣ.ವಿಚ್ಛೇದನ-

(1) XXX

(2) ಈ ಅಧಿನಿಯಮದ ಮತ್ತು ಅದರಡಿ ರಚಿಸಿದ ನಿಯಮಗಳ ಉಪಬಂಧಗಳಿಗೆ ಒಳಪಟ್ಟು, ವಿವಾಹದ ಯಾರೇ ಪಕ್ಷಕಾರರು, ವಿಶೇಷ ವಿವಾಹ (ತಿದ್ದುಪಡಿ) ಅಧಿನಿಯಮ, 1970 ರ (1970 ರ ಅಧಿನಿಯಮ ಸಂಖ್ಯೆ 29) ಪ್ರಾರಂಭದ ಮೊದಲಾಗಲಿ ಅಥವಾ ನಂತರವಾಗಲಿ, ಈ ಮುಂದಿನ ಕಾರಣಗಳ ಮೇರೆಗೆ, ಎ 0 ದರೆ:

( 6) XXX

(ii) ವಿವಾಹದ ಪಕ್ಷಕಾರರು, ಪಕ್ಷಕಾರರಾಗಿದ್ದ ವ್ಯವಹರಣೆಯಲ್ಲಿ, ದಾಂಪತ್ಯದ ಹಕ್ಕುಗಳ ಪೂರ್ವ ಸ್ಥಿತಿ ಪ್ರಾಪ್ತಿಗಾಗಿ ಡಿಕ್ರಿಯನ್ನು ಹೊರಡಿಸಿದ ನಂತರ ಒಂದು ವರ್ಷದ ಅಥವಾ ಹೆಚ್ಚಿನ ಅವಧಿಗಾಗಿ ಅವರ ನಡುವೆ ದಾಂಪತ್ಯದ ಹಕ್ಕುಗಳ ಪೂರ್ವ ಸ್ಥಿ ಪ್ರಾಪ್ತಿ ಇಲ್ಲದೆ ಇದ್ದಾಗ, ಜಿಲ್ಲಾ ನ್ಯಾಯಾಲಯಕ್ಕೆ ವಿಚ್ಛೇದನಕ್ಕಾಗಿ ಅರ್ಜಿ ಸಲ್ಲಿಸಬಹುದು.

14. ಪ್ರಕರಣದ ಸರಳ ಓದುವಿಕೆಯಿಂದ, ದಾಂಪತ್ಯದ ಹಕ್ಕುಗಳ ಪೂರ್ವಸ್ಥಿತಿ ಪ್ರಾಪ್ತಿಗಾಗಿ ಡಿಕ್ರಿಯನ್ನು ಹೊರಡಿಸಿದ ನಂತರ, ಒಂದು ವರ್ಷದ ಅಥವಾ ಹೆಚ್ಚಿನ ಅವಧಿಗಾಗಿ ಪಕ್ಷಕಾರರ ನಡುವೆ ದಾಂಪತ್ಯದ ಹಕ್ಕುಗಳ ಪೂರ್ವಸ್ಥಿತಿ ಇಲ್ಲದೆ ಇದ್ದಾಗ, ವಿವಾಹದ ಪಕ್ಷಕಾರರಲ್ಲಿ ಯಾರಾದರೊಬ್ಬರು ವಿಚ್ಛೇದನಕ್ಕಾಗಿ ಅರ್ಜಿಯನ್ನು ಸಲ್ಲಿಸಬಹುದು ಎಂಬುದು ಸ್ಪಷ್ಟವಾಗುತ್ತದೆ.ಪ್ರಸ್ತುತ ಮೊಕದ್ದಮೆಯಲ್ಲಿ,ದಿನಾಂಕ: 17/04/2015 ರಂದು ಎಂ.ಸಿ.ಸಂಖ್ಯೆ: 182/2011 ರಲ್ಲಿ ದಾಂಪತ್ಯದ ಹಕ್ಕುಗಳ ಪೂರ್ವಸ್ಥಿತಿ ಪ್ರಾಪ್ತಿಗಾಗಿ ಡಿಕ್ರಿಯನ್ನು ಹೊರಡಿಸಲಾಗಿತ್ತು ಎಂಬುದು ವಿವಾದವಾಗಿಲ್ಲ.ಅಂದಿನಿಂದ, ದಾಂಪತ್ಯದ ಹಕ್ಕುಗಳ ಪೂರ್ವಸ್ಥಿತಿ ಇರಲಿಲ್ಲ ಮತ್ತು ಪಕ್ಷಕಾರರು ಒಟ್ಟಿಗೆ ವಾಸಿಸಿರಲಿಲ್ಲ. ಸದರಿ ತೀರ್ಪಿಗೆ ಮತ್ತು ಡಿಗ್ರಿಗೆ ಈ ನ್ಯಾಯಾಲಯದಿಂದ ಯಾವುದೇ ತಡೆಯಾಜ್ಞೆ ಸಹ ಇರಲಿಲ್ಲ. ಅಂಥ ಸಂದರ್ಭಗಳಿದ್ದಾಗ, ಅಧಿನಿಯಮದ 27 (2) (ii) ನೇ ಪ್ರಕರಣವು ಯಥಾವತ್ತಾಗಿ ಅನ್ವಯವಾಗುತ್ತದೆ ಮತ್ತು ಪಕ್ಷಕಾರರಲ್ಲಿ ಯಾರಾದರೂ ಒಬ್ಬರು ವಿಚ್ಛೇದನಕ್ಕಾಗಿ ಅರ್ಜಿಯನ್ನು ಸಲ್ಲಿಸಬಹುದು ಮತ್ತು ಅಪೀಲುದಾರನು ಅಪೀಲುದಾರನು ಉತ್ತರವರ್ತಿಯಾಗಲು ಹಕ್ಕುಳ್ಳವರಾಗಿರುತ್ತಾರೆ.

15. ಅಪೀಲುದಾರನು ದಾಂಪತ್ಯದ ಹಕ್ಕುಗಳ ಪೂರ್ವಸ್ಥಿತಿ ಪ್ರಾಪ್ತಿಗೆ ಸಂಬಂಧಿಸಿದ ಡಿಕ್ರಿಯ ನಿರ್ದೇಶನವನ್ನು ಪಾಲಿಸಿರುವುದಿಲ್ಲವಾದ್ದರಿಂದ ಆತನು ತಪ್ಪಿತಸ್ಥನಾಗಿದ್ದಾನೆ ಮತ್ತು ಅದರಿಂದಾಗಿ, ಆತನು ತನ್ನ ತಪ್ಪಿನ ಅನುಕೂಲವನ್ನು ಪಡೆಯಲಾಗುವುದಿಲ್ಲ ಎಂಬ ಕಾರಣದ ಮೇಲೆ ವಿವಾಹ ವಿಘಟನೆ ಕೋರಿ ಸಲ್ಲಿಸಿದ ಅರ್ಜಿಯನ್ನು ವಜಾಗೊಳಿಸಲು ಕ್ರಮ ಜರುಗಿಸಲು ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಪ್ರಶ್ನಿತ ತೀರ್ಪನ್ನು ನಾವು ಅವಲೋಕಿಸಿದ್ದೇವೆ.ಮೇಲೆ ಉಲ್ಲೇಖಿಸಿದ 1954 ರ ಅಧಿನಿಯಮದ 27 ( 2) (ii) ನೇ ಪ್ರಕರಣವು, ದಾಂಪತ್ಯದ ಹಕ್ಕುಗಳ ಪೂರ್ವಸ್ಥಿತಿ ಪ್ರಾಪ್ತಿಗೆ ಸಂಬಂಧಿಸಿದ ಡಿಕ್ರಿಯ ನಿರ್ದೇಶನವನ್ನು ಅನುಪಾಲಿಸದಿರುವ ತಪ್ಪಿತಸ್ಥನಾಗಿರುವ ಸಂಗಾತಿಯು ವಿಚ್ಛೇದನದ ಡಿಕ್ರಿಗೆ ಅರ್ಜಿ ಸಲ್ಲಿಸುವುದನ್ನು ನಿರ್ಬಂಧಿಸುತ್ತದೆ.ಇನ್ನೊಂದೆಡೆ, ಅವರು ಪಕ್ಷಕಾರರಾಗಿರುವ ವ್ಯವಹರಣೆಯಲ್ಲಿ ದಾಂಪತ್ಯದ ಹಕ್ಕುಗಳ ಪೂರ್ವಸ್ಥಿತಿ ಪ್ರಾಪ್ತಿಗೆ ಸಂಬಂಧಿಸಿದ ಡಿಕ್ರಿಯನ್ನು ಹೊರಡಿಸಿದ ನಂತರ ಒಂದು ವರ್ಷದ ಅಥವಾ ಹೆಚ್ಚಿನ ಅವಧಿಗಾಗಿ ಪಕ್ಷಕಾರರ ನಡುವೆ ದಾಂಪತ್ಯದ ಹಕ್ಕುಗಳ ಪೂರ್ವಸ್ಥಿತಿ ಇರಲಿಲ್ಲವೆಂಬ ಕಾರಣದ ಮೇಲೆ ವಿಚ್ಛೇದನಕ್ಕಾಗಿ ಅರ್ಜಿಯನ್ನು ಮಂಡಿಸಲು ವಿವಾಹದ ಪಕ್ಷಕಾರರಲ್ಲಿ ಯಾರಾದರೊಬ್ಬರಿಗೆ ಅದು ಅಧಿಕಾರ ನೀಡುತ್ತದೆ.

16. 1954 ರ ಅಧಿನಿಯಮದ 34 ( 1) (ಬಿ) ಪ್ರಕರಣವನ್ನು ಮತ್ತು ಇದಕ್ಕೆ ವಿರುದ್ಧವಾಗಿ 1954 ರ ಅಧಿನಿಯಮದ 27 ( 2) (ii) ನೇ ಪ್ರಕರಣವನ್ನು ಸಹ ನಾವು ಉಲ್ಲೇಖಿಸಬಹುದಾಗಿದ್ದು, ಅದನ್ನು ಈ ಕೆಳಗಿನಂತೆ ಓದಲಾಗಿದೆ:

' ಪ್ರಕರಣ 34-ಡಿಗ್ರಿಗಳನ್ನು ಹೊರಡಿಸುವಲ್ಲಿ ನ್ಯಾಯಾಲಯದ ಕರ್ತವ್ಯ:

(1) V ನೇ ಅಧ್ಯಾಯ ಅಥವಾ VI ನೇ ಅಧ್ಯಾಯದ ಅಡಿಯಲ್ಲಿ ಯಾವುದೇ ವ್ಯವಹರಣೆಯಲ್ಲಿ, ಪ್ರತಿವಾದಿಯಾಗಿರಲಿ ಅಥವಾ ಆಗಿಲ್ಲದಿರಲಿ, ನ್ಯಾಯಾಲಯಕ್ಕೆ,

( ಎ) XXX

(ಬಿ) ಅರ್ಜಿಯು, 27 ನೇ ಪ್ರಕರಣದ (1) ನೇ ಉಪ ಪ್ರಕರಣದ (ಎ) ಖ ಂ ಡದಲ್ಲಿ ನಿರ್ದಿಷ್ಟಪಡಿಸಿದ ಕಾರಣವನ್ನಾಧರಿಸಿದ್ದಲ್ಲಿ, ಅರ್ಜಿದಾರನು ಯಾವುದೇ ರೀತಿಯಲ್ಲಿ, ಅದರಲ್ಲಿ ಉಲ್ಲೇಖಿಸಿದ ಲೈಂಗಿಕ ಸಂಭೋಗದ ಕೃತ್ಯದಲ್ಲಿ ಶಾಮೀಲಾಗಿಲ್ಲ ಅಥವಾ ಉಪೇಕ್ಷಿಸಿರಲಿಲ್ಲ ಅಥವಾ ನಿರ್ಲಕ್ಷಿಸಿರಲಿಲ್ಲ ಅಥವಾ ಅರ್ಜಿಯನ್ನು ಕೌಲ್ಯದ ಕಾರಣದ ಮೇಲೆ ಸಲ್ಲಿಸಲಾಗಿದ್ದಲ್ಲಿ, ಅರ್ಜಿದಾರನು ಯಾವುದೇ ರೀತಿಯಲ್ಲಿ ಕೌಲ್ಯವನ್ನು ಎಸಗಿರಲಿಲ್ಲ;

ಎಂದು ನ್ಯಾಯಾಲಯಕ್ಕೆ ಮನವರಿಕೆಯಾದರೆ?

17. 1954 ರ ಅಧಿನಿಯಮದ 27 ( 2) (ii) ನೇ ಪ್ರಕರಣದ ಅಡಿಯಲ್ಲಿ ಉಲ್ಲೇಖಿಸಿದ ಲೈಂಗಿಕ ಸಂಭೋಗದ ಕೃತ್ಯದಲ್ಲಿ ಅರ್ಜಿದಾರನು ಶಾಮೀಲಾಗಿದ್ದರೆ ಅಥವಾ ಉಪೇಕ್ಷಿಸಿದ್ದರೆ ಅಥವಾ ನಿರ್ಲಕ್ಷಿಸಿದ್ದರೆ ಅಥವಾ ಅರ್ಜಿಯನ್ನು ಕೌಲ್ಯದ ಕಾರಣದ ಮೇಲೆ ಸಲ್ಲಿಸಲಾಗಿದ್ದು, ಅರ್ಜಿದಾರನು ಸ್ವತಃ ಅಂಥ ಕೌಲ್ಯವನ್ನು ಎಸಗಿದ್ದರೆ, ಕಾನೂನಿನ ಈ ಉಪಬಂಧವು ಅರ್ಜಿ ಸಲ್ಲಿಸುವುದನ್ನು ನಿರ್ಬಂಧಿಸುತ್ತದೆ.

18. ಹೋಲಿಕೆಯ ರೂಪದಲ್ಲಿ, ಹಿಂದೂ ವಿವಾಹ ಅಧಿನಿಯಮ, 1955 ರ (ಇದರಲ್ಲಿ ಇನ್ನು ಮುಂದೆ ಸಂಕ್ಷಿಪ್ತವಾಗಿ " 1955 ರ ಅಧಿನಿಯಮ'ವೆಂದು ಉಲ್ಲೇಖಿಸಲಾಗಿದೆ) ಅಡಿಯಲ್ಲಿನ ಸಂವಾದಿ ಪ್ರಕರಣವನ್ನು ಸಹ ನಾವು ಉಲ್ಲೇಖಿಸಬಹುದಾಗಿದೆ.1955 ರ ಅಧಿನಿಯಮದ 13 ( 1-ಎ) ಪ್ರಕರಣವು 1954 ರ ಅಧಿನಿಯಮದ 27 ( 2) (ii) ನೇ ಪ್ರಕರಣದ ಇಂತಹುದೇ ಉಪಬಂಧಕ್ಕೆ ಸಂವಾದಿಯಾಗಿದ್ದು, ಅದು, ವಿವಾಹದ ಪಕ್ಷಕಾರರು, ಪಕ್ಷಕಾರರಾಗಿರುವ ವ್ಯವಹರಣೆಯಲ್ಲಿ ದಾಂಪತ್ಯದ ಹಕ್ಕುಗಳ ಪೂರ್ವಸ್ಥಿತಿ ಪ್ರಾಪ್ತಿಗೆ ಡಿಕ್ರಿಯನ್ನು ಹೊರಡಿಸಿದ ನಂತರ, ಒಂದು ವರ್ಷದ ಅಥವಾ ಹೆಚ್ಚಿನ ಅವಧಿಗೆ ಅವರ ನಡುವೆ ದಾಂಪತ್ಯದ ಹಕ್ಕುಗಳ ಪೂರ್ವಸ್ಥಿತಿ ಇರಲಿಲ್ಲವೆಂಬ ಕಾರಣದ ಮೇಲೆ ವಿಚ್ಛೇದನದ ಡಿಕ್ರಿಯು ವಿವಾಹದ ವಿಘಟನೆಗಾಗಿ ಅರ್ಜಿಯನ್ನು ಮಂಡಿಸಲು ವಿವಾಹದ ಪಕ್ಷಕಾರರಲ್ಲಿ ಯಾರಾದರೊಬ್ಬರನ್ನು ಶಕ್ತಗೊಳಿಸುತ್ತದೆ.

19. ಹಾಗೆಯೇ, 1955 ರ ಅಧಿನಿಯಮದ 23 (1) (ಎ) ಪ್ರಕರಣವು, 1954 ರ ಅಧಿನಿಯಮದ 34 (1) (ಬಿ) ಪ್ರಕರಣಕ್ಕೆ ಸಂವಾದಿಯಾಗಿದ್ದು, ಅದನ್ನು ಈ ಕೆಳಗಿನಂತೆ ಓದಲಾಗಿದೆ:

' ಪ್ರಕರಣದ 23 – ಡಿಗ್ರಿ ವ್ಯವಹರಣೆಗಳಲ್ಲಿ -

(1) ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ವ್ಯವಹರಣೆಯಲ್ಲಿ, ಪ್ರತಿವಾದಿಸಿರಲಿ ಅಥವಾ ಇಲ್ಲದಿರಲಿ,

( ಎ) ಪರಿಹಾರ ನೀಡುವುದಕ್ಕಾಗಿ ಯಾವುದೇ ಕಾರಣಗಳು ಇದ್ದು, ಅರ್ಜಿದಾರನು 5 ನೇ ಪ್ರಕರಣದ(ii) ನೇ ಖಂ ಡದ (ಎ) ಉಪ- ಖ ಂ ಡದಲ್ಲಿ, (ಬಿ) ಉಪ-ಖಂಡದಲ್ಲಿ ಅಥವಾ (ಸಿ) ಉಪ-ಖಂಡದಲ್ಲಿ ನಿರ್ದಿಷ್ಟಪಡಿಸಿದ ಕಾರಣದ ಮೇಲೆ ಕೋರಿದ ಪರಿಹಾರವನ್ನು ಕೋರಿರುವ ಸಂದರ್ಭವನ್ನು ಹೊರತುಪಡಿಸಿ, ಯಾವುದೇ ರೀತಿಯಲ್ಲಿ ಅಂಥ ಪರಿಹಾರದ ಉದ್ದೇಶಕ್ಕಾಗಿ ಆತನ ಅಥವಾ ಆಕೆಯ ಸ್ವಂತ ತಪ್ಪಿನ ಅಥವಾ ಅಸಮರ್ಥತೆಯ ಅನುಕೂಲ ಪಡೆಯುವುದಕ್ಕಾಗಿರುವುದಿಲ್ಲ ಎಂದು ನ್ಯಾಯಾಲಯಕ್ಕೆ ಮನವರಿಕೆಯಾದರೆ,

20. 1955 ರ ಅಧಿನಿಯಮದ 5 ನೇ ಪ್ರಕರಣದ(ii) ಖಂಡದ (ಎ), (ಬಿ) ಅಥವಾ (ಸಿ) ಖಂಡದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಕಾರಣಗಳ ಮೇರೆಗೆ ಆತನು ಪರಿಹಾರ ಕೋರಿರುವ ಸಂದರ್ಭಗಳಲ್ಲಿ ಹೊರತುಪಡಿಸಿ, ದಂಪತಿಗಳಲ್ಲಿ ಯಾರಾದರೂ ಒಬ್ಬರು ಅರ್ಜಿಯನ್ನು ಸಲ್ಲಿಸುವುದನ್ನು ಈ ಪ್ರಕರಣವು ನಿರ್ಬಂಧಿಸುತ್ತದೆ.ಈ ಎರಡೂ ಪ್ರಕರಣಗಳು, ಎಂದರೆ 1954 ರ ಅಧಿನಿಯಮದ 34 ( 1) (ಬಿ) ಪ್ರಕರಣ ಮತ್ತು 1955 ರ ಅಧಿನಿಯಮದ 23 ( 1) ( ಎ) ಪ್ರಕರಣಗಳು, 1954 ರ ಅಧಿನಿಯಮದ 27 ( 1) (ಎ) ಪ್ರಕರಣದ ಅಡಿಯಲ್ಲಾಗಲಿ ಅಥವಾ 1955 ರ ಅಧಿನಿಯಮದ 13 (1) (i) ನೇ ಪ್ರಕರಣದ ಅಡಿಯಲ್ಲಾಗಲಿ, ಸಂದರ್ಭಾನುಸಾರ, ಅರ್ಜಿದಾರನಿಗೆ/ಳಿಗೆ ಅನ್ವಯಿಸಬಹುದಾದ ಯಾವುದೇ ತಪ್ಪು ಇರದಿದ್ದರೆ ಮಾತ್ರ, ಆತನು/ಆಕೆಯು ಅರ್ಜಿಗಳನ್ನು ಸಲ್ಲಿಸುವುದಕ್ಕೆ ಅನುಮತಿಸುತ್ತವೆ.ಆದರೆ, 1954 ರ ಅಧಿನಿಯಮದ 27 (2) (ii) ನೇ ಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸುವುದನ್ನು ನಿಷೇಧಿಸುವಂಥ ಯಾವುದೇ ಉಪಬಂಧವಿರುವುದಿಲ್ಲ.

21. ಧರ್ಮೇಂದ್ರ ಕುಮಾರ್ ವಿರುದ್ಧ– ಉಷಾ ಕುಮಾರ್ ' ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಣಯವನ್ನು ಉಲ್ಲೇಖಿಸುವುದು ಸೂಕ್ತವಾಗಬಹುದಾಗಿದ್ದು, ಇದರ ಮೇರೆಗೆ, 1955 ರ ಅಧಿನಿಯಮದ 23 (1) (ಎ) ಪ್ರಕರಣದಲ್ಲಿ ಬರುವ ' ತಪ್ಪು ' ಎಂಬ ಪದಕ್ಕೆ ಸಂಬಂಧಿಸಿದಂತೆ, 1955 ರ ಅಧಿನಿಯಮದ 13 (1-ಎ) ಮತ್ತು 23 (1) (ಎ) ಪ್ರಕರಣಗಳೊಂದಿಗೆ ವ್ಯವಹರಿಸುವ ಸಂದರ್ಭವನ್ನು

1. (1977) 4 ಸರ್ವೋಚ್ಚ ನ್ಯಾಯಾಲಯ ಮೊಕದ್ದಮೆ 12

ನ್ಯಾಯಾಲಯವು ಹೊಂದಿತ್ತು ಮತ್ತು ಅದರ 3 ನೇ ಕಂಡಿಕೆಯಲ್ಲಿ ನ್ಯಾಯಾಲಯವು ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ.

3. ಹಿಂದು ವಿವಾಹ ಅಧಿನಿಯಮ, 1955 ರ 13 ( 1 ಎ)(ii) ನೇ ಪ್ರಕರಣವು, ದಾಂಪತ್ಯದ ಹಕ್ಕುಗಳ ಪೂರ್ವಸ್ಥಿತಿ ಪ್ರಾಪ್ತಿಗಾಗಿ ಡಿಕ್ರಿಯನ್ನು ಹೊರಡಿಸಿದ ನಂತರ, ಉಪಬ ಂ ಧದಲ್ಲಿ ನಿರ್ದಿಷ್ಟಪಡಿಸಿದ ಅವಧಿಗಾಗಿ ವಿವಾಹದ ಪಕ್ಷಕಾರರ ನಡುವೆ ದಾಂಪತ್ಯದ ಹಕ್ಕುಗಳ ಪೂರ್ವಸ್ಥಿತಿ ಪ್ರಾಪ್ತಿ ಇರಲಿಲ್ಲವೆಂಬ ಕಾರಣದ ಮೇಲೆ ವಿವಾಹ ವಿಚ್ಛೇದನದ ಡಿಕ್ರಿಯ ಮೂಲಕ ವಿವಾಹ ವಿಘಟನೆಗಾಗಿ ಅರ್ಜಿಯನ್ನು ಸಲ್ಲಿಸಲು ವಿವಾಹದ ಪಕ್ಷಕಾರರ ಪೈಕಿ ಯಾರೊಬ್ಬರಿಗಾದರೂ ಅವಕಾಶ ಕಲ್ಪಿಸುತ್ತದೆ.ಹಿಂದು ವಿವಾಹ (ತಿದ್ದುಪಡಿ) ಅಧಿನಿಯಮ, 1964 ರ (1964

ರಸಂಖ್ಯೆ: 44) 2 ನೇ ಪ್ರಕರಣದ ಮೂಲಕ 13 ನೇ ಪ್ರಕರಣದಲ್ಲಿ 1 (ಎ) ಉಪ-ಪ್ರಕರಣವನ್ನು ಸೇರಿಸಲಾಗಿತ್ತು.1964 ರ ತಿದ್ದುಪಡಿಗೆ ಮುಂಚೆ ಇದ್ದಂತಹ 13 ನೇ ಪ್ರಕರಣವು, ವಿಚ್ಛೇದನದ ಮೂಲಕ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಲು, ದಾಂಪತ್ಯದ ಹಕ್ಕುಗಳ ಪೂರ್ವಸ್ಥಿತಿ ಪ್ರಾಪ್ತಿಗಾಗಿ ಡಿಕ್ರಿಯನ್ನು ಪಡೆದಂಥ ಸಂಗಾತಿಗೆ ಮಾತ್ರವೇ ಅನುಮತಿ ನೀಡುತ್ತಿತ್ತು; ಯಾವ ಪಕ್ಷಕಾರರ ವಿರುದ್ಧ ಡಿಕ್ಕಿಯನ್ನು ಹೊರಡಿಸಲಾಗುತ್ತಿತ್ತೋ, ಆ ಪಕ್ಷಕಾರರಿಗೆ ಆ ಹಕ್ಕನ್ನು ನೀಡುತ್ತಿರಲಿಲ್ಲ.ಆದಾಗ್ಯೂ, 1 (ಎ) ಉಪ-ಪ್ರಕರಣವನ್ನು ಒಳಗೊಂಡಂತೆ 13 ನೇ ಪ್ರಕರಣದ ಮೇರೆಗೆ ಪರಿಹಾರ ನೀಡುವುದಕ್ಕೆ ಕಾರಣಗಳು, ಅಧಿನಿಯಮದ 23 ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಮುಂದುವರಿಯುತ್ತವೆ.ಪ್ರಸ್ತುತ ಉದ್ದೇಶಕ್ಕೆ ಸುಂಸಂಗತವಾದ 23 ನೇ ಪ್ರಕರಣದ ಭಾಗವನ್ನು ನಾವು ಮೇಲೆ ಉಲ್ಲೇಖಿಸಿದ್ದೇವೆ.ಅಪೀಲುದಾರನ ವಾದವೆಂದರೆ, ತನ್ನ ಲಿಖಿತ ಹೇಳಿಕೆಯಲ್ಲಿ ಮಾಡಿದ ಆಪಾದನೆಗಳಂತೆ, ತನ್ನೊಂದಿಗೆ ಜೀವಿಸಲು ತಾನು ನೀಡಿದ ಆಹ್ವಾನಗಳಿಗೆ ಪ್ರತಿಕ್ರಿಯಿಸದಿರುವ ಅರ್ಜಿದಾರಳ ನಡತೆಯ ಉದ್ದೇಶ 13 (I ಎ)(ii) ಪ್ರಕರಣದ ಅಡಿಯಲ್ಲಿ ಪರಿಹಾರ ಪಡೆಯುವುದಾಗಿದ್ದು, ತನ್ನ ಸ್ವಯಂಕೃತ ತಪ್ಪಿನ ಅನುಕೂಲ ಪಡೆಯುವ ಪ್ರಯತ್ನವಾಗಿದೆ.ಒಪ್ಪಿಕೊಂಡಿರುವ ಸಂಗತಿಗಳ ಮೇರೆಗೆ, ಅರ್ಜಿದಾರಳು ಸಂಶಯಕ್ಕೆಡೆ ಇಲ್ಲದಂತೆ ವಿಚ್ಛೇದನದ ಡಿಕ್ರಿಗಾಗಿ ಕೇಳಲು ಹಕ್ಕುಳ್ಳವಳಾಗಿದ್ದಾಳೆ, ಅರ್ಜಿದಾರಳು ಬಂದು ತನ್ನೊಂದಿಗೆ ಜೀವಿಸಬೇಕೆಂಬ ಪತಿಯ ಆಹ್ವಾನಕ್ಕೆ ಪ್ರತಿಕ್ರಿಯಿಸಿಲ್ಲ ಎಂಬ ಆಪಾದನೆ ಒಂದು ವೇಳೆ ನಿಜವಾದರೂ, ಪರಿಹಾರ ಪಡೆಯುವುದಕ್ಕೆ ಆಕೆಯನ್ನು ಹಕ್ಕುಳ್ಳವಳನ್ನಾಗಿಸುವುದಿಲ್ಲವೇ?ಹಾಗಾಗುವುದು ಎಂದು ನಿರ್ಣಯಿಸಲು ಸಾಧ್ಯವಿಲ್ಲವೆಂಬುದು ನಮ್ಮ ಅಭಿಪ್ರಾಯ, ರಾಮ್ ಕಲಿ (ಮೇಲೆ ಹೇಳಿದ) ಮೊಕದ್ದಮೆಯಲ್ಲಿ, ದೆಹಲಿ ಉಚ್ಚ ನ್ಯಾಯಾಲಯದ ಪೂರ್ಣ ಚ ಪೀಠವು, ದಾಂಪತ್ಯದ ಹಕ್ಕುಗಳ ಪೂರ್ವಸ್ಥಿತಿ ಪ್ರಾಪ್ತಿಗೆ ಸಂಬಂಧಿಸಿದ ಡಿಕ್ರಿಯ ನಿರ್ದೇಶನವನ್ನು ಪಾಲಿಸದೆ ಇರುವುದು ಮಾತ್ರವೇ, 23 (1) (ಎ) ಪ್ರಕರಣದ ಅರ್ಥವ್ಯಾಪ್ತಿಯೊಳಗೆ ತಪ್ಪು ಎ 0 ದಾಗುವುದಿಲ್ಲ ಎಂದು ಅಭಿಪ್ರಾಯಪಟ್ಟಿದೆ.ತರುವಾಯದ ಗಜ್ಜ ದೇವಿ -ವಿರುದ್ಧ-ಪುರುಷೋತ್ತಮ ಗಿರಿ (ಮೇಲೆ ಹೇಳಿದ) ಮೊಕದ್ದಮೆಯನ್ನು ಅವಲಂಬಿಸಿ ಮತ್ತು ಅದರಲ್ಲಿ ಈ ಅ ನಿರ್ಣಯವನ್ನು ವಿವರಿಸಿ, ಇದೇ ಉಚ್ಚ ನ್ಯಾಯಾಲಯದ ಮಾನ್ಯ ನ್ಯಾಯಾಧೀಶರು ಈ ಮುಂದಿನಂತೆ ಅಭಿಪ್ರಾಯಪಟ್ಟಿದ್ದಾರೆ:

"13 ( 1ಎ) ಪ್ರಕರಣದ ಸೇರ್ಪಡೆಗೆ ಮೊದಲು ಶಾಸನ ಪುಸ್ತಕದಲ್ಲಿ 23 ನೇ ಪ್ರಕರಣ ಇತ್ತು ...... ವೈವಾಹಿಕ ಅಪರಾಧದ ತಪ್ಪಿತಸ್ಥನಾಗಿರುವ ಮತ್ತು ಯಾರ ವಿರುದ್ಧ ನ್ಯಾಯಿಕ ಬೇರ್ಪಡಿಕೆಗೆ ಅಥವಾ ದಾಂಪತ್ಯದ ಹಕ್ಕುಗಳ ಪೂರ್ವಸ್ಥಿತಿ ಪ್ರಾಪ್ತಿಗಾಗಿ ಡಿಕ್ಕಿಯನ್ನು ಹೊರಡಿಸಲಾಗುವುದೋ ಆ ಪಕ್ಷಕಾರನು/ಳು ಅಧಿನಿಯಮದ 23 ನೇ ಪ್ರಕರಣದ ಅಭಿಪ್ರಾಯದಲ್ಲಿ ವಿಚ್ಛೇದನ ಪಡೆಯಲು ಹಕ್ಕುಳ್ಳವನಲ್ಲ/ಳಲ್ಲ ಎಂಬುದಾಗಿ ಸಂಸತ್ತು ಉದ್ದೇಶಿಸಿತ್ತೇ, ಆಗ ಅದು, 13 ( 1ಎ) ಪ್ರಕರಣಕ್ಕೆ ವಿನಾಯಿತಿಯನ್ನು ಸೇರಿಸಬೇಕಾಗಿತ್ತು ಮತ್ತು ಅಂಥ ವಿನಾಯಿತಿಯೊಂದಿಗೆ, 13 ( 1ಎ) ಪ್ರಕರಣದ ಉಪಬಂಧವು ಪ್ರಾಯೋಗಿಕವಾಗಿ, ತಪ್ಪಿತಸ್ಥ ಪಕ್ಷಕಾರನು/ಳು ಎಂದಿಗೂ ವಿವಾಹ ವಿಚ್ಛೇದನ ಪಡೆಯುವ ಪ್ರಯೋಜನವನ್ನು ಪಡೆಯಲಾಗುವುದಿಲ್ಲ ಎಂಬುದರಿ ೦ ದಾಗಿ ಅನವಶ್ಯಕವಾಗುವುದು, ಆದರೆ ನಿರಪರಾಧಿ ಪಕ್ಷಕಾರನು/ಳು, ತಿದ್ದುಪಡಿಗೆ ಮುಂಚೆ ಅದು ಇದ್ದಂತೆ ಶಾಸನದ ಮೇರೆಗೆ ಸಹ ಅದನ್ನು ಪಡೆಯಲು ಹಕ್ಕುಳ್ಳವರಾಗಿದ್ದರು.ಆದುದರಿಂದ, 13 ( 1ಎ) ಪ್ರಕರಣದ ಸೇರ್ಪಡೆಯ ಮೂಲಕ ಕಾನೂನಿನ ತಿದ್ದುಪಡಿಯನ್ನು ಪರಿಣಾಮಕಾರಿಯನ್ನಾಗಿಸುವ ಸಲುವಾಗಿ ಅಧಿನಿಯಮದ 23 ನೇ ಪ್ರಕರಣವನ್ನು ಊರ್ಜಿತವಲ್ಲವೆಂದು ಅರ್ಥೈಸಲಾಗುವುದಿಲ್ಲ.

ಅಧಿನಿಯಮದ 23 (1) ನೇ ಪ್ರಕರಣದ (ಎ) ಖಂಡದಲ್ಲಿ ಬರುವ " ಅರ್ಜಿದಾರನು/ಳು, ತನ್ನ ಸ್ವಯಂಕೃತ ತಪ್ಪಿನ ಅನುಕೂಲವನ್ನು ಯಾವುದೇ ರೂಪದಲ್ಲಿ ಪಡೆದು ಅ ಕೊಳ್ಳಲಾಗುವುದಿಲ್ಲ " ಎಂಬ ಅಭಿಪ್ರಾಯವನ್ನು, 13 (1ಎ) ಪ್ರಕರಣವು ಆತನಿಗೆ ಪದತ್ತಗೊಳಿಸಿರುವ ವಿವಾಹ ವಿಘಟನೆಯನ್ನು ಪಡೆಯುವ ಶಾಸನಾತ್ಮಕ ಹಕ್ಕಿನ ಅನುಕೂಲವನ್ನು ಪಡೆಯಲು ಅನ್ವಯಿಸಲಾಗುವುದಿಲ್ಲ ...... ಅಂಥ ಸಂದರ್ಭದಲ್ಲಿ, ತನ್ನ ಸ್ವಯಂಕೃತ ತಪ್ಪಿನ ಅನುಕೂಲವನ್ನು ಪಕ್ಷಕಾರನು ಪಡೆದುಕೊಳ್ಳದೆ ಇದ್ದರೂ, ಡಿಕ್ಕಿಯನ್ನು ಹೊರಡಿಸಿದ ನಂತರ ಬರುವ ಕಾನೂನುಬದ್ಧ ಹಕ್ಕನ್ನು ಮತ್ತು ಡಿಕ್ರಿಯನ್ನು ಅನುಪಾಲಿಸುವ ಪಕ್ಷಕಾರರ ವಿಫಲತೆಯನ್ನು ...... "

ನಮ್ಮ ಅಭಿಪ್ರಾಯದಲ್ಲಿ, ರಾಮ್ ಕಲಿ -ವಿರುದ್ಧ ಗೋಪಾಲ್ ದಾಸ್ (ಮೇಲೆ ಹೇಳದ) ಮತ್ತು ಗಮ್ಮ ದೇವಿ – ವಿರುದ್ಧ ಪುರುಷೋತ್ತಮ ಗಿರಿ (ಮೇಲೆ ಹೇಳದ) ಮೊಕದ್ದಮೆಗಳಲ್ಲಿ ನಿಯಮವನ್ನು ಸರಿಯಾಗಿಯೇ ಹೇಳಲಾಗಿದೆ.ಆದುದರಿ ೦ ದ, ದಾ ೦ ಪತ್ಯದ ಹಕ್ಕುಗಳ ಪೂರ್ವಸ್ಥಿತಿ ಪ್ರಾಪ್ತಿಗಾಗಿ ಯಾವ ಸಂಗಾತಿಯ ವಿರುದ್ಧ ಡಿಕ್ಕಿಯನ್ನು ಹೊರಡಿಸಲಾಗಿದೆಯೋ, ಆ ಸಂಗಾತಿಗೆ ಲಭ್ಯವಿರುವ ಪರಿಹಾರವನ್ನು, ತನ್ನ ಪರವಾಗಿ

ಹೊರಡಿಸಿದ ಡಿಕ್ಕಿಯ ನಿರ್ದೇಶನದ ಪಾಲನೆಯನ್ನು ಸಾಧಿಸದಿರುವ ಪಕ್ಷಕಾರನಿಗೆ/ಳಿಗೆ ನಿರಾಕರಿಸಬೇಕಾಗುತ್ತದೆ.23 (1) (ಎ) ಪ್ರಕರಣದ ಅರ್ಥವ್ಯಾಪ್ತಿಯೊಳಗೆ ' ತಪ್ಪಿತಸ್ಥ ' ಆಗುವ ಸಲುವಾಗಿ, ಆರೋಪಿತ ನಡತೆಯು ಪುನರ್ಮಿಲನದ ಆಹ್ವಾನಕ್ಕೆ ಒಪ್ಪಿಕೊಳ್ಳಲು ಇಚ್ಛೆ ಇಲ್ಲದಿರುವುದಕ್ಕಿಂತ ಹೆಚ್ಚಿನದೇನೋ ಆಗಿರಬೇಕಾಗುತ್ತದೆ, ಅದು ಪತಿ ಅಥವಾ ಪತ್ನಿಯು ಅನ್ಯಥಾ ಅರ್ಹರಾಗಿರುವ ಪರಿಹಾರದ ನಿರಾಕರಣೆಯನ್ನು ಸಮರ್ಥಿಸಲು ಸಾಕಷ್ಟು ಗಂಭೀರವಾದ ದುರ್ನಡತೆಯಾಗಿರಬೇಕು. "

22. ಶ್ರೀಮತಿ ಸರೋಜ್ ರಾಣಿ -ವಿರುದ್ಧ-ಸುದರ್ಶನ್ ಕುಮಾರ್ ಚಡ್ಡ 2 ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯ ನೀಡಿದ ನಿರ್ಣಯವನ್ನು ಚ ಸಹ ನಾವು ಉಲ್ಲೇಖಿಸಬಹುದಾಗಿದ್ದು, ಅದರಲ್ಲಿ ಪುನಃ ಮಾನ್ಯ ಸರ್ವೋಚ್ಚ ನ್ಯಾಯಾಲಯವ, ಮೊಕದ್ದಮೆಯ ಸಂಗತಿಗಳನ್ನು ಪರಿಗಣಿಸಿದ್ದು, ಅದರಲ್ಲಿ ದಂಪತಿಗಳು ಸಮ್ಮತಿಯೊಂದಿಗೆ ದಾಂಪತ್ಯದ ಹಕ್ಕುಗಳ ಪೂರ್ವಸ್ಥಿತಿ ಪ್ರಾಪ್ತಿಗಾಗಿ ಡಿಕ್ರಿಯನ್ನು ಪಡೆದುಕೊಂಡಿದ್ದರಾದರೂ, ತರುವಾಯದಲ್ಲಿ, ಇಬ್ಬರ ನಡುವೆ ಯಾವುದೇ ಸಹಬಾಳ್ವೆ ಇರಲಿಲ್ಲ.1955 ರ ಅಧಿನಿಯಮದ 13 ( 1-ಎ)(ii) ನೇ ಪ್ರಕರಣದ ಮೇರೆಗೆ ಉಪಬಂಧಿಸಿದ ಒಂದು ವರ್ಷವನ್ನು ಕಳೆದ ನಂತರ, ಪತಿಯು ವಿವಾಹ ವಿಚ್ಛೇದನ ಕೋರಿ ಅರ್ಜಿಯನ್ನು ಸಲ್ಲಿಸಿದನು.ದಾಂಪತ್ಯದ ಹಕ್ಕುಗಳ ಪೂರ್ವಸ್ಥಿತಿ ಪ್ರಾಪ್ತಿಗಾಗಿನ ಡಿಕ್ರಿಯ ನಿರ್ದೇಶನವನ್ನು ಪಾಲಿಸುವಲ್ಲಿ ಪತ್ನಿಯೊಂದಿಗೆ ಪತಿಯು ಒಟ್ಟಿಗೆ ವಾಸಿಸದೆ ಇದ್ದುದರಿಂದ, ಆತನಿಗೆ ಸ್ವಯಂಕೃತ ತಪ್ಪಿನ ಅನುಕೂಲವನ್ನು ಪಡೆಯಲು ಅನುಮತಿ ನೀಡಲಾಗುವುದಿಲ್ಲವೆಂದು ವಾದಿಸಿ, ಪತ್ನಿಯು ಅದನ್ನು ವಿರೋಧಿಸಿದ್ದಳು.ಮಾನ್ಯ ಸರ್ವೋಚ್ಚ ನ್ಯಾಯಾಲಯವು 1955 ರ ಅಧಿನಿಯಮದ 9 ನೇ, 13 ನೇ, ಚ ಮತ್ತು 23 ನೇ ಪ್ರಕರಣಗಳೊಂದಿಗೆ ವ್ಯವಹರಿಸಿ, 9 ನೇ ಕಂಡಿಕೆಯಲ್ಲಿ ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ:

"9. X XX

ಅಪೀಲುದಾರನ ಪರ ನ್ಯಾಯವಾದಿಯು, ನಮ್ಮ ಮುಂದೆ ವಾದಿಸಿದ್ದೇನೆಂದರೆ, ಅಧಿನಿಯಮದ 23 ( 1) (ಎ) ಪ್ರಕರಣದಲ್ಲಿನ ' ತಪ್ಪಿತಸ್ಥ ' ಎಂಬ ಅಭಿಪ್ರಾಯದ ದೃಷ್ಟಿಯಲ್ಲಿ, ಪತಿಯು ವಿವಾಹ ವಿಚ್ಛೇದನಕ್ಕಾಗಿ ಡಿಕ್ಕಿ ಪಡೆಯುವ ಹಕ್ಕನ್ನು ಈ ಮೊಕದ್ದಮೆಯಲ್ಲಿ ಕಳೆದುಕೊಂಡಿರುವನು.ಪ್ರಾರಂಭದಿಂದಲೇ ವಿವಾಹ ವಿಚ್ಛೇದನಕ್ಕಾಗಿ ಡಿಕ್ಕಿಯನ್ನು ಹೊರಡಿಸಬೇಕೆಂದು ಪತಿಯು ಬಯಸಿದ್ದನು ಎಂದು ವಾದಿಸಲಾಗಿದೆ.ಆದುದರಿಂದ, ಆತನು ದಾಂಪತ್ಯದ ಹಕ್ಕುಗಳ ಪೂರ್ವಸ್ಥಿತಿ ಪ್ರಾಪ್ತಿಗಾಗಿನ ಡಿಕ್ರಿಯನ್ನು ಉದ್ದೇಶಪೂರ್ವಕವಾಗಿಯೇ ವಿರೋಧಿಸಿರಲಿಲ್ಲ.ಇನ್ನೊ ೦ ದು ಕಡೆಯಿ ೦ ದ ನಿವೇದಿಸಿ ಕೊಂಡಿರುವುದೇನೆಂದರೆ, ಪ್ರತ್ಯರ್ಜಿದಾರ/ಪತಿಯು, ಅಂತಿಮವಾಗಿ ವಿಚ್ಛೇದನ ಪಡೆಯುವ ಉದ್ದೇಶದಿಂದ, ತಾನು ದಾಂಪತ್ಯದ ಹಕ್ಕುಗಳ ಪೂರ್ವಸ್ಥಿತಿ ಪ್ರಾಪ್ತಿಗಾಗಿನ ಡಿಕ್ರಿಯ ನಿರ್ದೇಶನವನ್ನು ಪಾಲಿಸುವುದಿಲ್ಲ ಎಂಬುದರ ಬಗ್ಗೆ ಸಂಪೂರ್ಣವಾಗಿ ಗೊತ್ತಿದ್ದೇ, ದಾಂಪತ್ಯದ ಹಕ್ಕುಗಳ ಪೂರ್ವಸ್ಥಿತಿ ಪ್ರಾಪ್ತಿಗಾಗಿನ ಡಿಕ್ಕಿಯನ್ನು ಪಡೆದುಕೊಳ್ಳಲು ಪತ್ನಿಗೆ ಅವಕಾಶ ಮಾಡಿಕೊಟ್ಟನು ಮತ್ತು ಆ ಮೂಲಕ ಪತ್ನಿ ಮತ್ತು ನ್ಯಾಯಾಲಯದ ದಾರಿ ತಪ್ಪಿಸಿದನು ಹಾಗೂ ಆ ನಂತರ ಪತ್ನಿಯೊಂದಿಗೆ ಒಟ್ಟಿಗೆ ವಾಸಿಸಲು ನಿರಾಕರಿಸಿದನು ಮತ್ತು ಈಗ, ಆತನ ತಪ್ಪಿನ ' ಅನುಕೂಲವನ್ನು ಪಡೆಯಲು ಅವಕಾಶ ನೀಡಬಾರದೆಂದು ನಿವೇದಿಸಿಕೊಳ್ಳಲಾಗಿದೆ.ಆದಾಗ್ಯೂ, ವಾದಗಳಲ್ಲಿ ಈ ಆರೋಪಗಳನ್ನು ಕುರಿತು ಏನನ್ನೂ ಹೇಳಿರುವುದಿಲ್ಲ.ಎಂದಿನಂತೆ, ಇದರ ಕಡೆ ಗಮನ ಸೆಳೆದಾಗ, ನ್ಯಾಯವಾದಿಯು ಆತನ ವಾದಗಳನ್ನು ತಿದ್ದುಪಡಿ ಮಾಡುವ ಅವಕಾಶವನ್ನು ಆತನಿಗೆ ನೀಡಬೇಕೆಂದು ಮನವಿ ಮಾಡಿಕೊಂಡಿದ್ದು, ಪಕ್ಷಕಾರರು ಸಾಮಾನ್ಯ ವಾದಗಳೊಂದಿಗೆ, ವಕೀಲರ ತಪ್ಪಿಗಾಗಿ ಬಳಲಬಾರದು.ಆದಾಗ್ಯೂ, ಈ ಮೊಕದ್ದಮೆಯಲ್ಲಿ, ದುರ್ಲ ೦ ಧ್ಯವಾದ ತೊಂದರೆಗಳಿವೆ.ಮೊದಲನೆಯದಾಗಿ, ವಾದವೇ ಇಲ್ಲ; ಎರಡನೆಯದಾಗಿ, ವಾಸ್ತವ ಪ್ರಶ್ನೆಯಾಗಿರುವ ಈ ಕಾರಣವನ್ನು ಯಾವುದೇ ಅಧಿವಿಚಾರಣಾ ನ್ಯಾಯಾಲಯಗಳ ಮುಂದೆ ವಾದಿಸಿರುವುದಿಲ್ಲ; ಮೂರನೆಯದಾಗಿ, ಅಧಿವಿಚಾರಣಾ ನ್ಯಾಯಾಲಯದಲ್ಲಿ ಮತ್ತು ವಿಭಾಗೀಯ ಪೀಠದ ಮುಂದೆ ಪತ್ನಿಯು ವಾದಿಸಿದ ಸಂಗತಿಗಳು ಮತ್ತು ಮಾಡಿದ ಆರೋಪಗಳು, ಆಕೆಯ ಅಪೀಲಿನ ಸಮರ್ಥನೆಯಲ್ಲಿ ವಾದಿಸಬೇಕೆಂದು ಈಗ ಕೋರಿರುವ ಸಂಗತಿಗಳಿಗೆ ವಿರುದ್ಧವಾಗಿವೆ.ಪತ್ನಿಯ ನಿಖರ ವಾದವೆಂದರೆ, ದಾಂಪತ್ಯದ ಹಕ್ಕುಗಳ ಪೂರ್ವಸ್ಥಿತಿ ಪ್ರಾಪ್ತಿಗಾಗಿನ ಡಿಗ್ರಿಯನ್ನು ಹೊರಡಿಸಿದ ನಂತರ, ಪತಿ-ಪತ್ನಿಯು ಎರಡು ದಿನಗಳ ಕಾಲ ಒಟ್ಟಿಗೆ ವಾಸಿಸಿದ್ದರು.ಈಗ ವಾದಿಸಬೇಕೆಂದು ಕೋರಿರುವ ಕಾರಣವೆಂದರೆ, ಯಾವುದೋ ಒಂದು ರೀತಿಯ ಜಾಲ ಹೆಣೆಯುವ ಮೂಲಕ ನ್ಯಾಯಿಕ ಬೇರ್ಪಡಿಕೆಗಾಗಿ ( ಈ ರೀತಿಯಾಗಿ ದಾಂಪತ್ಯದ ಹಕ್ಕುಗಳ ಪೂರ್ವಸ್ಥಿತಿ ಪ್ರಾಪ್ತಿಗಾಗಿನ ಡಿಕ್ರಿಯನ್ನು ಪಡೆಯುವುದು) ಪತ್ನಿಯು ಡಿಕ್ಕಿಯನ್ನು ಪಡೆಯಬೇಕೆಂದು ಮತ್ತು ನಂತರ, ಆಕೆಯೊಂದಿಗೆ ಒಟ್ಟಿಗೆ ವಾಸಿಸದಿರಲು ಮತ್ತು ಆ ತರುವಾಯ

ವಿಚ್ಛೇದನಕ್ಕಾಗಿ ಈ ಡಿಕ್ರಿಯನ್ನು ಪಡೆಯಬೇಕೆಂದು ಬಯಸಿದ್ದನು.ಇದನ್ನು ಪತ್ನಿಯು ಪ್ರತಿವಾದದಲ್ಲಿ ಆರೋಪಿಸಿದ ಸಂಗತಿಗಳಿಗೆ ವಿರುದ್ಧವಾಗಿ ವ್ಯಕ್ತಪಡಿಸಬಹುದಾಗಿತ್ತು.ಆದುದರಿಂದ, ಗಂಭೀರ ಮತ್ತು ತೀವ್ರತರ ತಪ್ಪಿರುವ ಯಾವುದೇ ವಾದ ಇಲ್ಲವೆಂಬ ಸಂಗತಿಯ ಹೊರತಾಗಿ, ಅಸಂಗತ ಮೊಕದ್ದಮೆಯನ್ನಾಗಿಸಲು ಪತ್ನಿಗೆ ಈ ಹಂತದಲ್ಲಿ ಅವಕಾಶ ಮಾಡಿಕೊಡುವ ಸಾಧ್ಯತೆ ಇಲ್ಲ. ಅಪೀಲುದಾರರ ಪರ ನ್ಯಾಯವಾದಿಯು, 23 ನೇ ಪ್ರಕರಣದ (1) ನೇ ಉಪ-ಪ್ರಕರಣದ (ಎ) ಖಂಡದಲ್ಲಿರುವ ತನ್ನ ಸ್ವಯಂಕೃತ ತಪ್ಪುಗಳ ಅನುಕೂಲ ಪಡೆಯುಲು " ಎಂಬ ಅಭಿಪ್ರಾಯವನ್ನು, ಕುಯುಕ್ತಿಯ ಮತ್ತು ಅಪ್ರಾಮಾಣಿಕ ಗಂಡಂದಿರ ಕೈಗಳಲ್ಲಿ ಭಾರತೀಯ ಹೆಂಡತಿಯರು ನರಳದಿರುವಂತೆ ಮಾಡುವ ರೀತಿಯಲ್ಲಿ ಅರ್ಥೈಸಬೇಕಾಗುತ್ತದೆ.ಮೊದಲನೆಯದಾಗಿ, ಈ ಸ್ಥೂಲ ವಾದವನ್ನು ಒಪ್ಪುವುದಕ್ಕೆ ಯಾವುದೇ ಅವಕಾಶವಿದ್ದರೂ, ಈ ಮೊಕದ್ದಮೆಗೆ ಇದು ವಾಸ್ತವಿಕ ಅರ್ಜಿಯಾಗುವುದಿಲ್ಲ ಮತ್ತು ಎರಡನೆಯದಾಗಿ, ಹಾಗಿದ್ದರೂ ಸಹ, ಆಗ ಆ ಪರಿಣಾಮಕ್ಕಾಗಿ ಶಾಸನದ ಅಗತ್ಯವಿದೆ.ಆದುದರಿ ಂ ದ, ಅಧಿ ವಿಚಾರಣಾ ನ್ಯಾಯಾಲಯಗಳು ಅಭಿಪ್ರಾಯಪಟ್ಟಂತೆ ಪತಿಯು ಅನ್ಯಥಾ ಹಕ್ಕುಳ್ಳವನಾಗಿರುವ ವಿವಾಹ ವಿಚ್ಛೇದನಕ್ಕಾಗಿನ ಡಿಕ್ರಿಗೆ ಆತನ ಹಕ್ಕನ್ನು ತಪ್ಪಿಸುವಂತಾಗುವ, ಅಧಿನಿಯಮದ 23 ( 1) ( ಎ) ಪ್ರಕರಣದಲ್ಲಿ ' ಆತನ ಸ್ವಯಂಕೃತ ತಪ್ಪುಗಳು ' ಎಂಬ ಅಭಿವ್ಯಕ್ತಿಯೊಳಗೆ ಆತನು ಬರುವ ಸಾಧ್ಯತೆ ಇರುವುದರ ವಿರುದ್ಧ ವಾದಿಸಬೇಕೆಂದು ಕೇಳುವ ನಡತೆ ಎಂಬ ಅಪೀಲುದಾರರ ಪರ ನ್ಯಾಯವಾದಿಯ ವಾದವನ್ನು ನಾವು ಒಪ್ಪಲಾಗುವುದಿಲ್ಲ.ಮುಂದುವರೆದು, ಕಾರಣಗಳು ಏನೇ ಇರಲಿ, ಈ ವಿವಾಹವು ಮುರಿದು ಬಿದ್ದಿದೆ ಮತ್ತು ಪತಿ-ಪತ್ನಿಯರಾಗಿ ಪಕ್ಷಕಾರರು ಇನ್ನು ಮುಂದೆ ಒಟ್ಟಿಗೆ ಜೀವಿಸಲಾರರು ಎಂಬುದು ಸಾಬೀತಾಗಿರುವುದರಿಂದ, ಯಾವುದೇ ಮಾನಸಿಕ ಅಳುಕಿಲ್ಲದೆ ನಾವು ಈ ನಿರ್ಣಯಕ್ಕೆ ಬರುತ್ತೇವೆ; ಸಂದರ್ಭ ಹಾಗಿದ್ದರೆ, ವಿಷಯವನ್ನು ಇಲ್ಲಿಗೆ ಮುಕ್ತಾಯಗೊಳಿಸುವುದು ಉತ್ತಮ."

23. 1954 ರ ಅಧಿನಿಯಮದ 27 ( 2) (ii) ಮತ್ತು 34 ( 1) (ಬಿ) ಪ್ರಕರಣಗಳು ಹಾಗೂ 1955 ರ ಅಧಿನಿಯಮದ 13 ( 1-ಎ)(ii) ಮತ್ತು 23 ( 1) ( ಎ) ಪ್ರಕರಣಗಳು ಕ್ರಮವಾಗಿ ಸದೃಶ ಸಂಗತಿಗಳಾಗಿರುವುದರಿಂದ ಮತ್ತು ಒಂದೇ ಅರ್ಥವನ್ನು ತಿಳಿಸುವುದರಿಂದ, ಧರ್ಮೇಂದ್ರ ಕುಮಾರ್ (ಮೇಲೆ ಹೇಳದ) ಮತ್ತು ಶ್ರೀಮತಿ ಸರೋಜ್ ರಾಣಿ (ಮೇಲೆ ಹೇಳದ) ಮೊಕದ್ದಮೆಗಳಲ್ಲಿ, 1955 ರ ಅಧಿನಿಯಮದ ಅಡಿಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯ ನೀಡಿದ ನಿರ್ಣಯಗಳನ್ನು ಪ್ರಸ್ತುತ ಮೊಕದ್ದಮೆಗೆ ಅನ್ವಯಿಸಬಹುದಾಗಿದೆ.

24.ದಿನಾಂಕ: 20.12.1964 ರಿಂದ ಜಾರಿಗೆ ಬರುವಂತೆ 1964 ರ ಅಧಿನಿಯಮಸಂಖ್ಯೆ: 44 ರ ಮೂಲಕ ಉಪ-ಪ್ರಕರಣ ( 1-ಎ) ಸೇರಿಸುವ ಮೂಲಕ 1955 ರ ಅಧಿನಿಯಮದ 13 ನೇ ಪ್ರಕರಣಕ್ಕೆ ತಿದ್ದುಪಡಿ ಮಾಡಿದಂತೆ, 1954 ರ ಅಧಿನಿಯಮದ 27 ನೇ ಪ್ರಕರಣಕ್ಕೂ ಸಹದಿನಾಂಕ: 12.08.1970 ರಿಂದ ಜಾರಿಗೆ ಬರುವಂತೆ 1970 ರ ಅಧಿನಿಯಮಸಂಖ್ಯೆ: 29 ರ ಮೂಲಕ (2) ನೇ ಉಪ-ಪ್ರಕರಣದ (i) ಮತ್ತು(ii) ನೇ ಖಂಡಗಳನ್ನು ಸೇರಿಸುವ ಮೂಲಕ ತಿದ್ದುಪಡಿ ಮಾಡಲಾಯಿತು.1955 ರ ಅಧಿನಿಯಮದ 23 ನೇ ಪ್ರಕರಣವು ಪ್ರಾರಂಭದಿಂದಲೇ ಜಾರಿಗೆ ಬಂದಂತೆಯೇ, 1954 ರ ಅಧಿನಿಯಮದ 34 ನೇ ಪ್ರಕರಣವು ಸಹ ಪ್ರಾರಂಭದಿಂದಲೇ ಜಾರಿಗೆ ಬಂದಿದೆ.1954 ರ ಅಧಿನಿಯಮದ 27 ನೇ ಪ್ರಕರಣದ (2) ನೇ ಉಪ-ಪ್ರಕರಣದ (i) ಮತ್ತು(ii) ನೇ ಖಂಡಗಳನ್ನು ಸೇರಿಸುವ ಮೂಲಕ 1954 ರ ಅಧಿನಿಯಮವನ್ನು ತಿದ್ದುಪಡಿ ಮಾಡಿ, 1970 ರ ಸದರಿ ತಿದ್ದುಪಡಿ ಅಧಿನಿಯಮದ ಪ್ರಾರಂಭದ ನಂತರ ವಿಚ್ಛೇದನ ಕೋರಲು ಪಕ್ಷಕಾರರಿಗೆ ಹೆಚ್ಚು ಕಾರಣಗಳನ್ನು ಸಂಸತ್ತು ಚ ಉಪಬಂಧಿಸಿದೆ.1954 ರ ಅಧಿನಿಯಮದ 34 ನೇ ಪ್ರಕರಣವು, ತಿದ್ದುಪಡಿಯಾದ ದಿನಾಂಕದಂದು ಜಾರಿಯಲ್ಲಿದ್ದರೂ, ಅದರ ವ್ಯಾಪ್ತಿಯೊಳಗೆ ಅದನ್ನು ತರಲು 1954 ರ ಅಧಿನಿಯಮದ 34 ನೇ ಪ್ರಕರಣದ ಅಡಿಯಲ್ಲಿ ತಿದ್ದುಪಡಿ ಉಪಬಂಧವನ್ನು ಸೇರಿಸುವುದು ಸೂಕ್ತವಲ್ಲವೆಂದು ಮತ್ತು ವಿವಾಹ ವಿಚ್ಛೇದನ ಕೋರುವ ಸಂಗಾತಿಯು ಯಾವುದೇ ತಪ್ಪನ್ನು ಎಸಗಿದ್ದಾನೆಯೇ/ಳೆಯೇ ಅಥವಾ ಇಲ್ಲವೇ ಎಂಬುದನ್ನು ನಿರ್ಧರಿಸಲು ನ್ಯಾಯಾಲಯದ ನಿರ್ಣಯಕ್ಕೆ ಅದನ್ನು ಬಿಟ್ಟುಬಿಡಲು ಸಂಸತ್ತು ಆಲೋಚಿಸಿದೆ.1954 ರ ಅಧಿನಿಯಮದ 34 ನೇ ಪ್ರಕರಣವು ಜಾರಿಯಲ್ಲಿದ್ದರೂ, 1954 ರ ಅಧಿನಿಯಮದ 34 ನೇ ಪ್ರಕರಣದ ವ್ಯಾಪ್ತಿ ಅಡಿಯಲ್ಲಿ 27 (2) (i) ಮತ್ತು(ii) ನೇ ಪ್ರಕರಣವನ್ನು ತರುವುದು ಸೂಕ್ತವೆಂಬುದನ್ನು ಪರ್ಯಾಲೋಚಿಸಿರಲಿಲ್ಲ.ದಾಂಪತ್ಯದ ಹಕ್ಕುಗಳ ಪೂರ್ವಸ್ಥಿತಿ ಪ್ರಾಪ್ತಿಗಾಗಿ ಡಿಕ್ರಿಯನ್ನು ಹೊರಡಿಸಿದ ನಂತರ ಸಹ, ಯಾವುದೇ ಕಾರಣಕ್ಕಾಗಿ ಪಕ್ಷಕಾರರು ಒಟ್ಟಿಗೆ ವಾಸಿಸಲಾಗದಿದ್ದಾಗ, ವಿವಾಹದ ಪಕ್ಷಕಾರರಲ್ಲಿ ಯಾರಾದರೊಬ್ಬರಾದರೂ ವಿವಾಹ ವಿಚ್ಛೇದನ ಕೋರಲು ಅದು ಕಾರಣವನ್ನು ಕಲ್ಪಿಸುತ್ತದೆ.ತಿದ್ದುಪಡಿಯಾದ ಉಪಬಂಧವನ್ನು ಓದಿದ ನಂತರ, ಎಂದರೆ, 1954 ರ ಅಧಿನಿಯಮದ 27 (2) (i) ಮತ್ತು(ii) ನೇ ಪ್ರಕರಣವನ್ನು 1954 ರ ಅಧಿನಿಯಮದ 34 ನೇ ಪ್ರಕರಣದ

ವ್ಯಾಪ್ತಿಯೊಳಗೆ ತರದಿರುವಲ್ಲಿ ಸಂಸತ್ತಿನ ಉದ್ದೇಶ ಸ್ಪಷ್ಟವಾದಾಗ, ಸೂಚಿತ ಅರ್ಥದ ಮೂಲಕ ಅಥವಾ ತಿದ್ದುಪಡಿ ಉಪಬಂಧದಲ್ಲಿ ಸೇರಿಸದಿರುವ ಪದಗಳನ್ನು ಸೂಚಿಸುವ ಮೂಲಕ, 1954 ರ ಅಧಿನಿಯಮದ 34 ನೇ ಪ್ರಕರಣದ ಅಡಿಯಲ್ಲಿ ಅದನ್ನು ತರಲಾಗುವುದಿಲ್ಲ ಎಂಬ ಅಭಿಪ್ರಾಯಕ್ಕೆ ನಾವು ಬರುತ್ತೇವೆ.ಮೇಲೆ ಉಲ್ಲೇಖಿಸಿದಂತೆ, 1955 ರ ಅಧಿನಿಯಮದ ಅಡಿಯಲ್ಲಿ ಇಂತಹುದೇ ಉಪಬಂಧದ ಅರ್ಥವಿವರಣೆ ಕುರಿತು ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿದ ನಿರ್ಣಯಗಳಿಂದ ನಾವು ಸಮರ್ಥನೆ ಪಡೆದಿದ್ದೇವೆ.

25. ಭಾರತದಲ್ಲಿ ವಿಶೇಷ ಸ್ವರೂಪದ ವಿವಾಹಗಳ ವಿಚ್ಛೇದನಕ್ಕೆ ಸಂಬಂಧಿಸಿದ ಕಾನೂನುಗಳು ಬ್ರಿಟಿಷರ ಕಾಲದಿಂದಲೂ ವಿಕಾಸಗೊಂಡಿವೆ.ಪ್ರಾರಂಭದಲ್ಲಿ, ಯಾವುದೇ ವಿಶೇಷ ಸ್ವರೂಪದ ವಿವಾಹಗಳನ್ನು ನಿರ್ವಹಿಸಲು ವಿಶೇಷ ವಿವಾಹ ಅಧಿನಿಯಮ, 1872 ನ್ನು ಅಧಿನಿಯಮಿತಗೊಳಿಸಲಾಗಿತ್ತು.ದೇಶವು ಸ್ವತಂತ್ರಗೊಂಡ ನಂತರ, ವಿವಾಹ ಮತ್ತು ವಿಚ್ಛೇದನಗಳೆರಡನ್ನೂ ನಿರ್ವಹಿಸಲು ಹೆಚ್ಚಿನ ಮತ್ತು ಸುಧಾರಿತ ಉಪಬಂಧಗಳ ಅವಶ್ಯಕತೆಯಿದೆಯೆಂದು ಪರಿಭಾವಿಸಲಾಯಿತು.ತತ್ಪರಿಣಾಮವಾಗಿ, ವಿಶೇಷ ವಿವಾಹ ಅಧಿನಿಯಮ, 1954 ನ್ನು ಅಧಿನಿಯಮಿತಗೊಳಿಸಲಾಯಿತು.ಆದರೆ, ಸಮಾಜದಲ್ಲಿ ಬೆಳವಣಿಗೆಗಳು ಉಂಟಾದಂತೆಲ್ಲಾ ಈ ಅಧಿನಿಯಮಿತಿಯಿಂದ ನಿರ್ವಹಿಸಲಾಗುತ್ತಿದ್ದ ವ್ಯಕ್ತಿಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನಗಳಲ್ಲಿ ಬದಲಾವಣೆಗಳಾದಂತೆಲ್ಲಾ, ಸದರಿ ಅಧಿನಿಯಮಿತಿಯ ಅಡಿಯಲ್ಲಿ ಲಭ್ಯವಿರುವಂಥ ಕಾರಣಗಳು ಸಮಾಜದ ಬೇಡಿಕೆಗಳನ್ನು ಈಡೇರಿಸಲು ಸಮರ್ಪಕವಾಗಿಲ್ಲ ಎಂದು ಸಂಸತ್ತು ಪರಿಭಾವಿಸಿತು.ವ್ಯಾಪಕವಾಗಿ ಬದಲಾವಣೆಯಾಗುತ್ತಿರುವ ಭಾರತೀಯ ಸಮಾಜದ ಬೆಳವಣಿಗೆಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಮುಖ್ಯವಾಗಿ ಹಿಂದುಗಳು, ಕ್ರಿಶ್ಚಿಯನ್ನರು ಅಥವಾ ಮುಸಲ್ಮಾನರ ವಿವಾಹ, ವಿಚ್ಛೇದನ, ಜೀವನಾಂಶ ಇತ್ಯಾದಿಯನ್ನು ನಿರ್ವಹಿಸುವ ಇತರ ಅಧಿನಿಯಮಿತಿಗಳೊಂದಿಗೆ, ವಿಶೇಷ ವಿವಾಹ ಅಧಿನಿಯಮಕ್ಕೆ ಅವಶ್ಯಕ ತಿದ್ದುಪಡಿಗಳನ್ನು ತರಲಾಯಿತು.

26. ಈ ಅಧಿನಿಯಮಿತಿಯಲ್ಲಿ ಹಾಗೆ ತಂದಂಥ ತಿದ್ದುಪಡಿಗಳು ಭಾರತೀಯ ಸಮಾಜದಲ್ಲಿನ ಆಲೋಚನೆಗಳನ್ನು ಮತ್ತು ಬದಲಾವಣೆಗಳನ್ನು ಬಿಂಬಿಸುತ್ತವೆ.ಒಂದು ಕಾಲದಲ್ಲಿ, ಹಿಂದು ಸಮಾಜಕ್ಕೆ ವಿವಾಹ ವಿಚ್ಛೇದನದ ಪರಿಕಲ್ಪನೆಯು ಅಪರಿಚಿತವಾಗಿದ್ದರಿಂದ, ವಿಶೇಷವಾಗಿ ಹಿಂದುಗಳಿಗೆ ಸಂಬಂಧಿಸಿದಂತೆ ವಿಚ್ಛೇದನಕ್ಕೆ ಯಾವುದೇ ಕಾರಣಗಳೇ ಇರಲಿಲ್ಲ.ಕಾಲಗತಿಯೊಂದಿಗೆ, 1955 ರ ಅಧಿನಿಯಮ ಮತ್ತು 1954 ರ ಅಧಿನಿಯಮಗಳೆರಡರ ಅಡಿಯಲ್ಲಿ ವಿವಾಹ ವಿಘಟನೆ ಕೋರಲು ಹೆಚ್ಚು ಸಂಖ್ಯೆಯ ಕಾರಣಗಳನ್ನು ಸೇರಿಸುತ್ತಾ ಬರಲಾಯಿತು.ಕಳೆದ ಕೆಲವು ದಶಕಗಳಲ್ಲಿ, ಭಾರತೀಯ ಸಮಾಜವು, ಕೌಟುಂಬಿಕ ಜೀವನದಲ್ಲಿ ಅಪಾರ ಬದಲಾವಣೆಗಳಿಗೆ ಒಳಗಾಗಿದೆ ಮತ್ತು ಯಾವುದೇ ಕಾರಣಕ್ಕೂ ಒಟ್ಟಿಗೆ ತಾವು ಬಾಳಲಾಗುವುದಿಲ್ಲವೆಂಬ ಭಾವನೆ ಇರುವ ವಿವಾಹಿತ ದಂಪತಿಗಳು, ಜೀವನದಲ್ಲಿ ತಾವು ಇನ್ನೂ ಉತ್ತಮ ಆಯ್ಕೆಗಳ ಕಡೆಗೆ ಗಮನ ಹರಿಸಲು ಸಾಧ್ಯವಾಗುವಂತೆ ವಿಚ್ಛೇದನವನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ.ಸಹಜವಾಗಿಯೇ, ವಿವಾಹ ಮತ್ತು ವಿಚ್ಛೇದನ ಕುರಿತು ಬದಲಾದ ದೃಷ್ಟಿಕೋನವನ್ನು ಅಳವಡಿಸಿಕೊಳ್ಳುವ ಅಂಥ ಪ್ರಕ್ರಿಯೆಯಲ್ಲಿ, ಭಾರತೀಯ ಸಮಾಜವು ಹಲವಾರು ಗಂಭೀರ ಸವಾಲುಗಳನ್ನು ಎದುರಿಸುತ್ತಿದೆ ಮತ್ತು ಅದಕ್ಕೆ ಪರಿಹಾರಗಳನ್ನು ಕಂಡುಕೊಳ್ಳುವ ಅವಶ್ಯಕತೆ ಇದೆ.

27. ಈ ಹಿನ್ನೆಲೆಯಲ್ಲಿ, ಪ್ರಾರಂಭದಿಂದ ಹಲವಾರು ಬದಲಾವಣೆಗಳಿಗೆ ಒಳಗಾಗಿರುವ 1954 ರ ಅಧಿನಿಯಮದ 27 ನೇ ಪ್ರಕರಣವನ್ನು ನಾವು ವಿಶ್ಲೇಷಿಸಬಹುದಾಗಿದೆ.1954 ರ ಅಧಿನಿಯಮದ 27 ನೇ ಪ್ರಕರಣಕ್ಕೆ ಉಪ-ಪ್ರಕರಣ (1) ಎಂದು ಮರುಸಂಖ್ಯೆ ನೀಡಲಾಯಿತು, (i) ಮತ್ತು (1) ನೇ ಖಂಡಗಳನ್ನು ಬಿಟ್ಟುಬಿಡಲಾಯಿತು, 1954 ರ ಅಧಿನಿಯಮದ 27 (2) (i) ಮತ್ತು(ii) ನೇ ಪ್ರಕರಣವನ್ನುದಿನಾಂಕ: 12.08.1970 ರಿಂದ ಜಾರಿಗೆ ಬರುವಂತೆ 1970 ರ ಅಧಿನಿಯಮಸಂಖ್ಯೆ: 29 ರ ಮೂಲಕ ಸೇರಿಸಲಾಯಿತು.1954 ರ ಅಧಿನಿಯಮದ (ಎ), (ಬಿ), (ಇ) ಮತ್ತು (ಎಫ್) ಖಂಡಗಳನ್ನು ಪ್ರತ್ಯಾಯೋಜಿಸಲಾಯಿತು ಮತ್ತು ಪರಂತುಕವನ್ನು ಬಿಟ್ಟುಬಿಡಲಾಯಿತು ಹಾಗೂದಿನಾಂಕ: 27.05.1976 ರಿಂದ ಜಾರಿಗೆ ಬರುವಂತೆ, 1976 ರ ಅಧಿನಿಯಮಸಂಖ್ಯೆ: 68 ರ ಮೂಲಕ 1954 ರ ಅಧಿನಿಯಮದ 27 (1ಎ) (i) ಮತ್ತು(ii) ನೇ ಪ್ರಕರಣವನ್ನು ಸೇರಿಸಲಾಯಿತು.ದಿನಾಂಕ: 01.03.2019 ರಿಂದ ಜಾರಿಗೆ ಬರುವಂತೆ 2019 ರ ಅಧಿನಿಯಮಸಂಖ್ಯೆ: 6 ರ ಮೂಲಕ (ಜಿ) ಖಂಡವನ್ನು ಬಿಟ್ಟುಬಿಡಲಾಯಿತು.

28. 1954 ರ ಅಧಿನಿಯಮದ 22 ನೇ ಪ್ರಕರಣದ ಅಡಿಯಲ್ಲಿ ದಾಂಪತ್ಯದ ಹಕ್ಕುಗಳ ಪೂರ್ವಸ್ಥಿತಿ ಪ್ರಾಪ್ತಿಗೆ ಡಿಕ್ರಿಯನ್ನು ಹೊರಡಿಸಿದ ಸಂದರ್ಭದಲ್ಲಿ ಮತ್ತು ಅಂಥ ಯಾವುದೇ ಹಕ್ಕಿನ ಪ್ರಾಪ್ತಿ ಇರದಿದ್ದರೆ ಹಾಗೂ ಒಂದು

ವರ್ಷದ ಅವಧಿಗೆ ಒಟ್ಟಿಗೆ ವಾಸಿಸುವುದನ್ನು ಪುನರಾರಂಭಿಸದಿದ್ದರೆ, ಅದನ್ನು ವಿಚ್ಛೇದನಕ್ಕೆ ಕಾರಣವೆಂದು ಪರಿಗಣಿಸಲಾಗುವುದು.ಒಂದು ವರ್ಷದ ಅವಧಿಯು ಸೂಕ್ತ ಸಮಯವಾಗಿದ್ದು, ಅಷ್ಟರೊಳಗೆ ವಿವಾಹದ ಪಕ್ಷಕಾರರು ತಮ್ಮ ಭಿನ್ನಾಭಿಪ್ರಾಯಗಳನ್ನು ಸರಿಪಡಿಸಿಕೊಂಡ ನಂತರ ಒಟ್ಟಿಗೆ ವಾಸಿಸುವುದನ್ನು ಪುನರಾರಂಭಿಸಬಹುದು.ಇಂತಹ ಸನ್ನಿವೇಶದಲ್ಲಿ, ಅಂಥ ದಾಂಪತ್ಯದ ಹಕ್ಕುಗಳ ಪೂರ್ವಸ್ಥಿತಿ ಪ್ರಾಪ್ತಿಯು ಒಂದು ವರ್ಷದ ಒಳಗಾಗಿ ಸಾಧ್ಯವಾಗದಿದ್ದರೆ, ಸಾಮಾನ್ಯವಾಗಿ ವಿವಾಹವನ್ನು ಸ್ಥಗಿತಗೊಂಡಿದೆ ಎಂದು ಪರಿಗಣಿಸಲಾಗುತ್ತದೆ ಮತ್ತು ಅದು ಪಕ್ಷಕಾರರಲ್ಲಿ ಯಾರಾದರೂ ವಿಚ್ಛೇದನ ಕೋರಲು ಕಾರಣವಾಗುತ್ತದೆ.ಅಧಿನಿಯಮಿತಿಯ ಅಡಿಯಲ್ಲಿನ ಈ ಸುಸಂಗತ ಉಪಬಂಧವನ್ನು ಪರಿಗಣಿಸುವಾಗ,ದಿನಾಂಕ: 12.08.1970 ರಿಂದ ಜಾರಿಗೆ ಬರುವಂತೆ 1970 ರ ತಿದ್ದುಪಡಿ ಅಧಿನಿಯಮಸಂಖ್ಯೆ: 29 ನ್ನು ಯಾವ ಉದ್ದೇಶಕ್ಕೆ ಪ್ರಸ್ತಾವಿಸಲಾಗಿತ್ತೋ ಆ ಉದ್ದೇಶವನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ.

29. ಪ್ರಸ್ತುತ ಮೊಕದ್ದಮೆಯ ಸಂಗತಿಗಳಿಂದ,ದಿನಾಂಕ: 17.04.2015 ರ ತೀರ್ಪಿನ ಮೂಲಕ ಪ್ರತ್ಯರ್ಜಿದಾರ-ಪತ್ನಿಯ ಪರವಾಗಿ ದಾಂಪತ್ಯದ ಹಕ್ಕುಗಳ ಪೂರ್ವಸ್ಥಿತಿ ಪ್ರಾಪ್ತಿಗಾಗಿ ಡಿಕ್ರಿಯನ್ನು ನೀಡಲಾಗಿತ್ತು ಎಂಬುದನ್ನು ತಿಳಿಯಬಹುದಾಗಿದೆ.ಒಪ್ಪಿಕೊಂಡಂತೆ, ದಂಪತಿಗಳ ನಡುವೆ ಒಟ್ಟಿಗೆ ವಾಸಿಸುವ ಸಂದರ್ಭ ಇರಲಿಲ್ಲ.ತನ್ನ ಪತಿಯ ವಿರುದ್ಧ ದಾಂಪತ್ಯದ ಹಕ್ಕುಗಳ ಪೂರ್ವಸ್ಥಿತಿ ಪ್ರಾಪ್ತಿಗಾಗಿ ನೀಡಿದ ಡಿಕ್ರಿಯನ್ನು ಜಾರಿಗೊಳಿಸುವ ಯಾವುದೇ ಪ್ರಯತ್ನವನ್ನು ಪ್ರತ್ಯರ್ಜಿದಾರ-ಪತ್ನಿಯು ಮಾಡಿಲ್ಲವೆಂಬುದು ಆಕೆಯ ವಾದವಾಗಿಲ್ಲ.ಆಕೆಯು ತನ್ನ ತವರು ಮನೆಗೆ ಹೋದಾಗ ಸಹ, ಪತಿಯು ಡಿಕ್ರಿಯ ನಿರ್ದೇಶನವನ್ನು ಪಾಲಿಸಲು ಆಕೆಯನ್ನು ಮರಳಿ ಕರೆದುಕೊಳ್ಳಲು ಸಿದ್ಧನಿರಲಿಲ್ಲ ಮತ್ತು ಆ ಇಚ್ಛೆಯನ್ನು ಹೊಂದಿರಲಿಲ್ಲ ಮತ್ತು ಅವರ ನಡುವೆ ಜಗಳವಾಗುತ್ತಿತ್ತು.ಆದರೆ, ಅಂಥ ವಾದವನ್ನು ಸಮರ್ಥಿಸುವ ಯಾವುದೇ ಸಾಕ್ಷ್ಯವನ್ನು ನ್ಯಾಯಾಲಯದ ಮುಂದೆ ಮಂಡಿಸಿರುವುದಿಲ್ಲ.ದಾಂಪತ್ಯದ ಹಕ್ಕುಗಳ ಪೂರ್ವಸ್ಥಿತಿ ಪ್ರಾಪ್ತಿಗಾಗಿ ಹೊರಡಿಸಿದ ಡಿಕ್ರಿಯ ನಿರ್ದೇಶನವನ್ನು ಪಾಲಿಸುವಲ್ಲಿ ಪ್ರತ್ಯರ್ಜಿದಾರ-ಪತ್ನಿಯೊಂದಿಗೆ ಒಟ್ಟಿಗೆ ವಾಸಿಸಲು ಅಪೀಲುದಾರ-ಪತಿಯು ಸಿದ್ಧನಿರಲಿಲ್ಲ ಮತ್ತು ಇಚ್ಛೆಯನ್ನು ಹೊಂದಿರಲಿಲ್ಲ ಎಂಬುದನ್ನು ಪರಿಗಣನೆಗೆ ತೆಗೆದುಕೊಂಡರೂ ಸಹ, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮೇಲಿನ ಘೋಷಣೆಗಳಿಂದ, ವಿಚ್ಛೇದನಕ್ಕಾಗಿ ಡಿಕ್ರಿಯನ್ನು ಕೋರಿ ಅರ್ಜಿಯನ್ನು ಸಲ್ಲಿಸುವ ಅನುಕೂಲವನ್ನು ತೆಗೆದುಕೊಳ್ಳುವುದು, ಪತಿಯ ಕಡೆಯಿಂದಾದ ತಪ್ಪೆಂದು ಪರಿಗಣಿಸಲಾಗುವುದಿಲ್ಲ ಹಾಗೂ ದಾಂಪತ್ಯದ ಹಕ್ಕುಗಳ ಪೂರ್ವಸ್ಥಿತಿ ಪ್ರಾಪ್ತಿಗಾಗಿ ನೀಡಿದ ನಿರ್ದೇಶನಗಳನ್ನು ಅನುಸರಿಸದೆ ಇರುವುದಕ್ಕಾಗಿ, 1954 ರ ಅಧಿನಿಯಮದ 27 ( 2) (ii) ನೇ ಪ್ರಕರಣವನ್ನು ಅನ್ವಯಿಸುವುದರಿಂದ ಪತಿಯನ್ನು ನಿರ್ಬಂಧಿಸಲಾಗುವುದಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

30. ದಾಖಲೆಯಲ್ಲಿರುವ ಸಾಕ್ಷ್ಯವು, ತಮ್ಮ ವಿವಾಹದ ನಂತರ ಒಂದು ವರ್ಷದ ಒಳಗಾಗಿ ಅಪೀಲುದಾರನು ವಿಚ್ಛೇದನ ಕೋರಿ ಮೊದಲ ಅರ್ಜಿಯನ್ನು ಸಲ್ಲಿಸಿದ 2009 ರಿಂದಲೇ ದಂಪತಿಗಳು ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ ಹಾಗೂ ಒಟ್ಟಿಗೆ ವಾಸಿಸುವುದನ್ನು ಪ್ರಾರಂಭಿಸುವ ಯಾವುದೇ ಸಾಧ್ಯತೆ ಇರಲಿಲ್ಲ ಎಂಬುದನ್ನು ಬಹಿರಂಗಪಡಿಸುತ್ತದೆ.ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಪ್ರಶ್ನಿತ ತೀರ್ಪನ್ನು ನಾವು ಪರಿಶೀಲಿಸಿದ್ದೇವೆ.ಪತಿಯ ವಿರುದ್ಧ ವಿಚ್ಛೇದನದ ಆದೇಶವನ್ನು ಹೊರಡಿಸಿದ ನಂತರ ಸಹ ಯಾವುದೇ ದಾಂಪತ್ಯದ ಹಕ್ಕುಗಳ ಪೂರ್ವಸ್ಥಿತಿ ಪ್ರಾಪ್ತಿ ಇರಲಿಲ್ಲವೆಂಬ ಕಾರಣದ ಮೇಲೆ ಅದು ಅರ್ಜಿಯನ್ನು ವಜಾಗೊಳಿಸಲು ಕ್ರಮ ಜರುಗಿಸಿದೆಯಾದ್ದರಿಂದ, 1954 ರ ಅಧಿನಿಯಮದ 27 (2) (ii) ನೇ ಪ್ರಕರಣ ಮತ್ತು 34 ನೇ ಪ್ರಕರಣದ ವಾಪ್ತಿ ಮತ್ತು ಉದ್ದೇಶವನ್ನು ಪರಿಗಣಿಸದೆ, ಆತನು ವಿಚ್ಛೇದನದ ಪರಿಹಾರಕ್ಕೆ ಹಕ್ಕುಳ್ಳವನಾಗುವುದಿಲ್ಲ.

31. ಆದ್ದರಿಂದ, ಮೈಸೂರಿನ II ನೇ ಹೆಚ್ಚುವರಿ ಪ್ರಧಾನ ಕುಟುಂಬ ನ್ಯಾಯಾಲಯದ ಕಡತದಲ್ಲಿನ ಎಂ.ಸಿ.ಸಂಖ್ಯೆ: 395 ರಲ್ಲಿ ಹೊರಡಿಸಿದದಿನಾಂಕ: 03.04.2019 ರ ತೀರ್ಪು ಮತ್ತು ಡಿಗ್ರಿಯನ್ನು ತಳ್ಳಿಹಾಕಲು ಅರ್ಹವಾಗಿದೆ ಮತ್ತು ಪಕ್ಷಕಾರರ ನಡುವಿನ ವಿವಾಹವನ್ನು 1954 ರ ಅಧಿನಿಯಮದ 27 (2) (ii) ನೇ ಪ್ರಕರಣದ ಅಡಿಯಲ್ಲಿ ವಿಚ್ಛೇದನದ ಡಿಕ್ರಿಯ ಮೂಲಕ ವಿಘಟಿಸಬೇಕಾದ ಅಗತ್ಯವಿದೆ ಎಂಬುದು ನಮ್ಮ ಅಭಿಪ್ರಾಯವಾಗಿದೆ. ಮೇಲಿನ ಚರ್ಚೆಯ ಹಿನ್ನೆಲೆಯಲ್ಲಿ, ಅಪೀಲನ್ನು ಪುರಸ್ಕರಿಸಲಾಗಿದೆ. ಮೈಸೂರಿನ ವೆಸ್ಲೆ ಕೆಥಡ್ರಲ್ ಚರ್ಚ್‌ನಲ್ಲಿದಿನಾಂಕ: 18.04.2008 ರಂದು ಅಪೀಲುದಾರ ಮತ್ತು ಪ್ರತ್ಯರ್ಜಿದಾರಳ ನಡುವೆ ಆಗಿದ್ದ ವಿವಾಹವನ್ನು, ವಿಚ್ಛೇದನದ ಡಿಕ್ರಿಯ ಮೂಲಕ ವಿಘಟಿಸಲಾಗಿದೆ. ಅಪೀಲುದಾರನಿಂದ ಜೀವನಾಂಶ ಕೋರಲು

ಪ್ರತ್ಯರ್ಜಿದಾರಳು ಹಕ್ಕುಳ್ಳವಳಾಗಿದ್ದಾಳೆ ಮತ್ತು ಜೀವನಾಂಶ ಕೋರುವ ಆಕೆಯ ಹಕ್ಕನ್ನು ಕಾಯ್ದಿರಿಸಲಾಗಿದೆ ಎಂದು ಪ್ರತ್ಯರ್ಜಿದಾರಳ ಪರ ಮಾನ್ಯ ನ್ಯಾಯವಾದಿಗಳು ನಿವೇದಿಸಿಕೊಂಡಿದ್ದಾರೆ.

ಈ ಅಪೀಲಿನ ವಿಲೆಯು, ಕಾನೂನಿನಗನುಸಾರವಾಗಿ ಜೀವನಾಂಶ ಕೋರಲು ಪತ್ಯರ್ಜಿದಾರ/ಪತ್ನಿಯ ದಾರಿಗೆ ಅಡ್ಡ ಬರುವುದಿಲ್ಲವೆಂಬುದನ್ನು ಸ್ಪಷ್ಟಪಡಿಸಲಾಗಿದೆ.

ಪಕ್ಷಕಾರರು ತಮ್ಮ ತಮ್ಮ ವೆಚ್ಚಗಳನ್ನು ತಾವೇ ಭರಿಸುವುದು.

ತದನುಸಾರವಾಗಿ ರಿಜಿಸ್ಟ್ರಿಯು ಡಿಕ್ರಿಯನ್ನು ಬರೆಯುವುದು.